ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು

# KARNATAKA LEGISLATIVE COUNCIL DEBATES

ಅಧಿಕೃತ ವರದಿ

## OFFICIAL REPORT

೧೩೧ ನೇ ಅಧಿವೇಶನ

**131$^{th}$ SESSION**

ಸಂಪುಟ–೪೪೬ ಕ್ರಮಾಂಕ (೧)

**Volume -446 (No. 1)**

( ೨೩ ನೇ ಸೆಪ್ಟೆಂಬರ್ ೨೦೧೬)

**(23$^{th}$ September 2016)**

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಬೆಂಗಳೂರು

**Karnataka Legislative Council Secretariat, Bangalore**

## **ಕರ್ನಾಟಕ ವಿಧಾನ ಪರಿಷತ್ತು**

23 ನೇ ಸೆಪ್ಟೆಂಬರ್ 2016
ಶುಕ್ರವಾರ

## **ವಿಷಯಾನುಕ್ರಮಣಿಕೆ**


**1. ಸಂತಾಪ ಸೂಚನೆ** **1-6**

ಶ್ರೀ ಬಸವರಾಜ ಹಾವಗಿಯಪ್ಪ ಪಾಟೀಲ್, ಶ್ರೀ ಎಫ್.ಎಂಖಾನ್, ಶ್ರೀ ಕೆ.ಸಿ.ರೆಡ್ಡಿ, ಶ್ರೀ ಹಸನ್‌ಸಾಬ್ ಇಮಾಮ್ ಸಾಬ್ ಖುದಾವಂದ್, ಶ್ರೀ ಬಸವರಾಜ ಚನ್ನಪ್ಪ ಪಾಟೀಲ, ಶ್ರೀ ಯಶವಂತ ಬಿ.ಹೆರವಟ್ಟಾ

ಡಾ|| ಜಿ.ಪರಮೇಶ್ವರ್ (ಸಭಾ ನಾಯಕರು)
ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)

2. **ವರದಿಯನ್ನೊಪ್ಪಿಸುವುದು** 6

3. **ವಿಶೇಷ ಸದನ ಸಮಿತಿಯ ಕಾಲಾವಕಾಶ ವಿಸ್ತರಿಸುವ ಪ್ರಸ್ತಾವನೆ** **6**

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)-

4. **ಸಭೆಯ ಮುಂದಿಡಲಾದ ಕಾಗದ ಪತ್ರಗಳು** **7**

5. **ಕಾವೇರಿ ನದಿ ನೀರಿನ ಬಿಕ್ಕಟ್ಟಿನ ಕುರಿ ನಿರ್ಣಯ ಮಂಡನೆ** **7-14**

ಶ್ರೀ . ಎಸ್.ರವಿ

ಶ್ರೀ . ವಿ.ಎಸ್.ಉಗ್ರಪ್ಪ

ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)
ಶ್ರೀ ಬಸವರಾಜ ಹೊರಟ್ಟಿ

**ಕರ್ನಾಟಕ ವಿಧಾನ ಪರಿಷತ್ತು**

ಶುಕ್ರವಾರ, 23ನೇ ಸೆಪ್ಟೆಂಬರ್ 2016

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಮಧ್ಯಾಹ್ನ 12 ಗಂಟೆ 56 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ **(ಶ್ರೀ ಡಿ.ಹೆಚ್.ಶಂಕರಮೂರ್ತಿ)**ಅವರು ಪೀಠದಲ್ಲಿ ಉಪಸ್ಥಿತರಿದ್ದರು.

**"**ವಂದೇ ಮಾತರಂ**"** ಗೀತೆಯೊಂದಿಗೆ ಸದನವು ಪ್ರಾರಂಭಗೊಂಡಿತು.

**ಸಭಾಪತಿಗಳು:–** ಕಳೆದ ಸದನ ಮುಗಿದು ಇವತ್ತು ಈ ಸದನ ಪ್ರಾರಂಭ ಮಾಡುತ್ತಿದ್ದೇವೆ. ಈ ಮಧ್ಯದಲ್ಲಿ ಕೆಲವು ಗಣ್ಯರು ನಮ್ಮನ್ನು ಅಗಲಿದ್ದಾರೆ. ಅವರನ್ನು ನೆನಪು ಮಾಡಿಕೊಳ್ಳುವ, ಶ್ರದ್ಧಾಂಜಲಿಯನ್ನು ಸಲ್ಲಿಸುವ ಜವಾಬ್ದಾರಿ ನಮ್ಮ ಮೇಲಿದೆ ಮತ್ತು ಅದು ನಮ್ಮ ಕರ್ತವ್ಯ ಕೂಡ ಆಗಿದೆ.

## 1. ಸಂತಾಪ ಸೂಚನೆ

**ವಿಷಯ: ವಿಧಾನಪರಿಷತ್ತಿನ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಬಸವರಾಜ ಹಾವಗಿಯಪ್ಪ ಪಾಟೀಲ್, ವಿಧಾನ ಪರಿಷತ್ತಿನ ಹಾಗೂ ರಾಜ್ಯ ಸಭೆಯ ಮಾಜಿ ಸದಸ್ಯರಾದ ಶ್ರೀ ಎಫ್.ಎಂ.ಖಾನ್, ಖ್ಯಾತ ನೀರಾವರಿ ತಜ್ಞ ಶ್ರೀ ಕೆ.ಸಿ.ರೆಡ್ಡಿ, ಜಮ್ಮು–ಕಾಶ್ಮೀರ ಗಡಿ ಭಾಗದಲ್ಲಿ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ ಶ್ರೀ ಹಸನ್‌ಸಾಬ್ ಇಮಾಮ್‌ಸಾಬ್ ಖುದಾವಂದ್, ಶ್ರೀ ಬಸವರಾಜ ಚನ್ನಪ್ಪ ಪಾಟೀಲ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಯಶವಂತ ಬಿ.ಹೆರವಟ್ಟಾ ಇವರುಗಳ ನಿಧನದ ಬಗ್ಗೆ.**

**ಡಾ: ಜಿ.ಪರಮೇಶ್ವರ್(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ತಾವು ತಂದಿರುವ ಸಂತಾಪ ಸೂಚನೆಯನ್ನು ಬೆಂಬಲಿಸುತ್ತೇನೆ. 3 ಜನ ಶಾಸಕರು, ಒಬ್ಬರು ಅಧಿಕಾರಿಗಳು ಮತ್ತು ಜಮ್ಮು–ಕಾಶ್ಮೀರ ಗಡಿ ಭಾಗದಲ್ಲಿ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ ಮಡಿದಂಥವರಿಗೆ ಸಂತಾಪ ಸೂಚಿಸುವುದಕ್ಕೆ ಈ ಸೂಚನೆಯನ್ನು ತಂದಿದ್ದೀರಿ. ಮೊದಲನೆದಾಗಿ, ಶ್ರೀ ಬಸವರಾಜ ಹಾವಗಿಯಪ್ಪ ಪಾಟೀಲ್‌ರವರ ಬಗ್ಗೆ ಹೇಳುವುದಾದರೆ, 1998 ರಿಂದ 2004, 2004 ರಿಂದ 2009 ರ ತನಕ ಚುನಾಯಿತ ಶಾಸಕರಾಗಿ ಮತ್ತು 2010 ರಿಂದ 5.1.2016ರವರೆಗೆ ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾಗಿ ವಿಧಾನಪರಿಷತ್ತಿನ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಮಾನ್ಯ ಬಂಗಾರಪ್ಪನವರ ಸಚಿವ ಸಂಪುಟದಲ್ಲಿ ಮತ್ತು ಮಾನ್ಯ ಎಸ್.ಎಂ.ಕೃಷ್ಣಾರವರ ಸಚಿವ ಸಂಪುಟದಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಮಾನ್ಯ ಎಸ್.ಎಂ.ಕೃಷ್ಣಾರವರ ಸಚಿವ ಸಂಪುಟದಲ್ಲಿ ನಾನೂ ಕೂಡ ಸಚಿವನಾಗಿ ಕೆಲಸ ಮಾಡುತ್ತಿದ್ದೆ. ನಮ್ಮ ಜೊತೆ ನಡೆದುಕೊಳ್ಳುತ್ತಿದ್ದ ರೀತಿಯನ್ನು ನೋಡಿದರೆ ಅವರು ಒಬ್ಬ ಮಾದರಿ ರಾಜಕಾರಣಿ ಆಗಿದ್ದರು ಎಂದು ಹೇಳಿದರೆ ತಪ್ಪಾಗಲಾರದು. ಬೀದರ್ ಭಾಗದಿಂದ ಬಂದಿದ್ದ ಅವರು ಇಡೀ ರಾಜ್ಯದ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡಿದ್ದರು. ಅವರು ಸಚಿವರಾಗಿದ್ದಾಗ, ನನ್ನ ಭಾಗದ ಕೆಲಸ ಮಾತ್ರ ಆಗಬೇಕು, ಬೀದರ್ ಭಾಗದ ಕೆಲಸ ಮಾತ್ರ ಆಗಬೇಕು ಅಥವಾ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳಿಗೆ ಮಾತ್ರ ಸ್ಪಂದಿಸಬೇಕು ಎಂದು ಯೋಚನೆ ಮಾಡಿದವರಲ್ಲ. ನಾನು ನೋಡಿದ ಹಾಗೆ, ಒಬ್ಬ ಸಜ್ಜನ ರಾಜಕಾರಣಿಯಾಗಿದ್ದ ಅವರು ಯಾವತ್ತೂ ಕೂಡ ಧ್ವನಿ ಎತ್ತಿ ಮಾತನಾಡಲಿಲ್ಲ. ಬಹಳ ಸೂಕ್ಷ್ಮ ವ್ಯಕ್ತಿಯಾಗಿದ್ದರು. ಅವರು ಹೇಳಬೇಕಾಗಿದ್ದನ್ನು ಹೇಗೆ ಹೇಳಬೇಕೋ ಆ ರೀತಿಯಲ್ಲಿ ಹೇಳಿಬಿಡುತ್ತಿದ್ದರು. ನಮಗೆ, ಅವರು ಹಾಗೆ ಹೇಳಿಬಿಟ್ಟರಲ್ಲಾ ಎಂದು ನೋವಾಗದ ಧಾಟಿಯಲ್ಲಿ ಹೇಳುತ್ತಿದ್ದರು. ಇಂತಹ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ.

ಶ್ರೀ ಎಫ್.ಎಂ.ಖಾನ್‌ರವರು, 1974ರಿಂದ ವಿಧಾನ ಪರಿಷತ್ತಿನ ಸದಸ್ಯರಾಗಿ, 1976 ಮತ್ತು 1982ರಲ್ಲಿ ರಾಜ್ಯಸಭೆಯ ಸದಸ್ಯರಾಗಿ ಆಯ್ಕೆಯಾಗಿದ್ದರು. ಅವರು ಕಾಂಗ್ರೆಸ್ ಪಕ್ಷದಲ್ಲಿದ್ದಾಗ ನಾನು ರಾಜಕಾರಣಕ್ಕೆ ಬಂದಿರಲಿಲ್ಲ. ಮಾನ್ಯ ಗುಂಡೂರಾವ್‌ರವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅವರ ಜೊತೆ ಒಡನಾಟವಿತ್ತು. ನಮ್ಮ ಹೈಕಮಾಂಡ್‌ನ ಜೊತೆ ಬಹಳ ಹತ್ತಿರವಾಗಿ ಕೆಲಸ ಮಾಡುವ ಅವಕಾಶವನ್ನು ಅವರು ಪಡೆದುಕೊಂಡಿದ್ದರು ಎಂದು ನಮಗೆ ನಮ್ಮ ಹಿರಿಯರು ಹೇಳುತ್ತಿದ್ದರು. ಅವರು ಇತ್ತೀಚಿಗೆ ನಮ್ಮನ್ನು ಅಗಲಿದ್ದಾರೆ. ಅವರೂ ಕೂಡ ಒಬ್ಬ ಸಜ್ಜನ ರಾಜಕಾರಣಿಯಾಗಿ ಕೆಲಸ ಮಾಡಿದ್ದರು. ವಿಶೇಷತೆ ಎಂದರೆ ಅವರು ಪರಿಸರ ಪ್ರೇಮಿಯಾಗಿದ್ದರು. ಕೊನೆಯ ದಿನಗಳನ್ನು ತಮ್ಮ ಊರಿನ ತೋಟದಲ್ಲಿ ಕಳೆದರು. ಇಂಥವರು ಇವತ್ತು ನಮ್ಮನ್ನು ಅಗಲಿದ್ದಾರೆ.

ಅದೇ ರೀತಿ ಮಾನ್ಯ ಯಶವಂತ ಹೆರವಟ್ಟರವರು ಕೂಡ ವಿಧಾನ ಪರಿಷತ್ತಿನ ಸದಸ್ಯರಾಗಿ 1988 ಮತ್ತು 1994 ಈ ಎರಡು ಅವಧಿಯಲ್ಲಿ ಕೆಲಸ ಮಾಡಿದ್ದಾರೆ. ಗ್ರಾಮೀಣ ಭಾಗದಲ್ಲಿ ಮೊದಲು 'Adult Education' ಎನ್ನುವ ಕಾರ್ಯಕ್ರಮವಿತ್ತು. ಆಂಗ್ಲ ಭಾಷೆಯಲ್ಲಿ ಅವರ ವಿಶೇಷತೆ ಏನೆಂದರೆ, ಈ ಕಾರ್ಯಕ್ರಮದ ಮುಖಾಂತರ ಯಾರು ಕಲಿತಿಲ್ಲ ಅವರಿಗೆ ಕಲಿಸುವಂತಹ ಕೆಲಸ ಮಾಡುತ್ತಿದ್ದರು. ಮಾನ್ಯ ಹೆರವಟ್ಟರವರು ಆಂಗ್ಲ ಭಾಷೆಯಲ್ಲಿ ಆ 'Adult Education' ಕಲಿಸುವ ಪ್ರಯತ್ನ ಮಾಡಿದ್ದರು. ಅವರು ಕೂಡ ನಮ್ಮನ್ನು ಅಗಲಿದ್ದಾರೆ.

ಇವತ್ತು ನಾವು ಬೆಂಗಳೂರಿನಲ್ಲಿ ಬಹಳ ಕಿಷ್ಕಿಂಧೆಯನ್ನು ನೋಡುತ್ತಿದ್ದೇವೆ. ಎಲ್ಲಿ ನೋಡಿದರೂ ಟ್ರಾಫಿಕ್ ಜಾಮ್ ಆಗುತ್ತಿದೆ. ಸುಮಾರು 60 ಲಕ್ಷಕ್ಕೂ ಹೆಚ್ಚು ವಾಹನಗಳು ಬೆಂಗಳೂರಿನಲ್ಲಿ ಓಡಾಡುತ್ತಿವೆ. ಸಿರ್ಸಿ ವೃತ್ತದಿಂದ ಟೌನ್‌ಹಾಲ್‌ವರೆಗೂ ಫ್ಲೈಓವರ್ ಇದೆ, ಅದರ ಮೇಲೆ ಬಹಳ ಬೇಗ ಬಂದು ಬಿಡುತ್ತೇವೆ. ಅದನ್ನು ಹತ್ತುವುದು ಸ್ವಲ್ಪ ಕಷ್ಟವಾಗುತ್ತದೆ. ಹತ್ತಿದ ಮೇಲೆ ನಾವು ಬಹಳ ಬೇಗ ಬಂದು ಬಿಡುತ್ತೇವೆ. ಅದೇ ರೀತಿ ಸಿಲ್ಕ್‌ಬೋರ್ಡ್‌ನಿಂದ ಎಲೆಕ್ಟ್ರಾನಿಕ್ ಸಿಟಿಯವರೆಗೆ ಸುಮಾರು 8 ಕಿ.ಮೀ ಅಂತರ ಇರಬಹುದು. ಬಹಳ ವೇಗವಾಗಿ ತಲುಪಿಬಿಡುತ್ತೇವೆ. ಮೊದಲಿನ ಸ್ಥಿತಿಯನ್ನು ಯಾರಾದರೂ ಊಹೆ ಮಾಡಿದರೆ, ಹೊಸೂರು ಬಿಟ್ಟು ಬೆಂಗಳೂರು ತಲುಪುವುದೆಂದರೆ ಚೆನ್ನೈನಿಂದ ಹೊಸೂರಿಗೆ ಬರುವುದು ಒಂದು ಭಾಗವಾದರೆ ಹೊಸೂರಿನಿಂದ ಬೆಂಗಳೂರಿಗೆ ಬರುವುದು ಒಂದು ಭಾಗ ಎನ್ನುವಷ್ಟರ ಮಟ್ಟಿಗೆ ಪ್ರಯಾಣವಾಗುತ್ತಿತ್ತು. ಮಾನ್ಯ ಕೆ.ಸಿ. ರೆಡ್ಡಿಯವರ ಪರಿಣಿತಿ ಹೇಗಿತ್ತೆಂದರೆ, ಅವರು ಸಿಲ್ಕ್‌ಬೋರ್ಡ್‌ನಿಂದ ಎಲೆಕ್ಟ್ರಾನಿಕ್ ಸಿಟಿಯವರೆಗೆ ಫ್ಲೈಓವರ್ ಮಾಡುವ ಪರಿಣಿತಿ ಹೊಂದಿದ್ದರು. ಬಹುಶಃ ಇವತ್ತು ನಮಗೆ ಅದು ಕಡಿಮೆಯಾಗಿದೆ. ಇವತ್ತು ಕೂಡ ಸರ್ಕಾರ ಈಗಾಗಲೇ ಬಸವೇಶ್ವರ ಸರ್ಕಲ್‌ನಿಂದ ಹೆಬ್ಬಾಳದವರೆಗೂ ಒಂದು ಫ್ಲೈಓವರ್ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಘೋಷಣೆ ಮಾಡಿದ್ದಾರೆ. ಇಂತಹ ಪರಿಣಿತಿ ಇರುವ ಇಂಜಿನಿಯರ್‌ಗಳು ಇವತ್ತು ಕಡಿಮೆಯಾಗುತ್ತಿದ್ದಾರೆ. ಶ್ರೀ ಕೆ.ಸಿ. ರೆಡ್ಡಿಯವರು ನೀರಾವರಿ ನಿಗಮದ ತಾಂತ್ರಿಕ ಉಪ ಸಮಿತಿಯ ಅಧ್ಯಕ್ಷರಾಗಿದ್ದರು. ಇಂದು ಇಡೀ ದೇಶದಲ್ಲಿ ನೀರಾವರಿಯದ್ದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಅದು ಕುಡಿಯುವ ನೀರಿಗಿರಬಹುದು, ನೀರಾವರಿಗೆ ಇರಬಹುದು, ಅದೇ ಒಂದು ದೊಡ್ಡ ವಿಚಾರವಾಗಿದೆ. ಶ್ರೀ ಕೆ.ಸಿ. ರೆಡ್ಡಿಯವರು ಕೃಷ್ಣಾ ಜಲಭಾಗ್ಯ ನಿಗಮದ ತಾಂತ್ರಿಕ ಕಮಿಟಿಯ ಉಪ ಸಮಿತಿಯ ಅಧ್ಯಕ್ಷರಾಗಿದ್ದರು. ಅವರಿಗೆ ಅರ್ಹತೆಯ ಮೇಲೆ 1996ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಕೊಟ್ಟಿದ್ದರು. 2005ರಲ್ಲಿ ಪದ್ಮಶ್ರೀ ಪ್ರಶಸ್ತಿ ಕೊಟ್ಟರು. ಅವರಿಗೆ ಆ ಪ್ರಶಸ್ತಿಯನ್ನು ಪಡೆಯುವ ಅರ್ಹತೆ ಇತ್ತು. ಸಮಾಜಕ್ಕೆ ಕೊಡುಗೆ ಕೊಡುವಂಥ ಕೆಲಸವನ್ನು ಯಾರು ಮಾಡಿದ್ದಾರೆ ಅವರಿಗೆ ಇಂಥ ಪ್ರಶಸ್ತಿಗಳು ಅನ್ವಯಿಸುತ್ತವೆ. ಆ ದೃಷ್ಟಿಯಲ್ಲಿ ಕೆ.ಸಿ. ರೆಡ್ಡಿಯವರಿಗೆ ರಾಜ್ಯೋತ್ಸವ ಮತ್ತು ಪದ್ಮಶ್ರೀ ಪ್ರಶಸ್ತಿ ಕೊಟ್ಟಿರುವುದು ಬಹಳ ಒಳ್ಳೆಯದು. ಅವರು ನೀರಾವರಿ ತಜ್ಞರಾಗಿದ್ದು ಒಬ್ಬ ಒಳ್ಳೆಯ ಆಡಳಿತಗಾರರಾಗಿದ್ದರು. ತಮಗೆ ಗೊತ್ತಿರುವಂತೆ ಅಂತಹ ಪರಿಣತರು ಯಾರಿರುತ್ತಾರೆ ಅವರು ಯಾವ ಯಾವುದೋ ವಿಷಯದಲ್ಲಿ ಪರಿಣಿತರಿರುತ್ತಾರೆ, ಆದರೆ ಒಳ್ಳೆಯ ಆಡಳಿತಗಾರರಾಗಿರುವುದಿಲ್ಲ. ಆದರೆ ಕೆ.ಸಿ. ರೆಡ್ಡಿಯವರು ಒಳ್ಳೆಯ ಆಡಳಿತಗಾರರೂ ಆಗಿದ್ದರು. ಈಗ ಇಂಜಿನಿಯರುಗಳಿಗೆ ಸರ್ಕಾರ ಬೇಕಾದಷ್ಟು ಹಣ ಮಂಜೂರು ಮಾಡಿಕೊಡುತ್ತದೆ. ಆದರೆ ಅದನ್ನು ಯಾವ ರೀತಿ ಖರ್ಚು ಮಾಡಬೇಕು, ಯಾವ ರೀತಿ ಕೆಲಸ ತೆಗೆದುಕೊಳ್ಳಬೇಕು ಇವೆಲ್ಲಾ ವಿಚಾರಗಳಲ್ಲಿ ಅವರು ಬಹಳ ಪರಿಣಿತಿ ಹೊಂದಿದ್ದರೆಂದು ಈ ಸಂದರ್ಭದಲ್ಲಿ ಅವರನ್ನು ನೆನಪಿಸಿಕೊಳ್ಳುತ್ತೇನೆ.

ಹಾಗೆಯೇ ಇತ್ತೀಚೆಗೆ ಕಾಶ್ಮೀರದಲ್ಲಿ ನಡೆದ ಘಟನೆ, ಬಹುಶಃ ಇದು ಪ್ರತಿಯೊಬ್ಬ ಭಾರತೀಯನಿಗೂ ಮೈನವಿರೇಳಿಸುವಂತಹ ಘಟನೆ. ಯಾರಾದರೂ ಕೂಡ ಆ ಗಡಿ ಭಾಗದಲ್ಲಿ ಹೋಗಿ ನೋಡಿದರೆ ಗೊತ್ತಾಗುತ್ತದೆ. ಪ್ರತಿ ದಿನ ಎಂಥ ಕಷ್ಟಗಳನ್ನು ಆ ಯೋಧರು ಅನುಭವಿಸುತ್ತಿದ್ದಾರೆ ಎಂಬುದನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಮಲಗಿದ್ದ ಸುಮಾರು 18 ಜನ ಸೈನಿಕರನ್ನು ಒಂದೇ ಸಾರಿ ಹತ್ಯೆಗೈದಿದ್ದಾರೆ. ಯುದ್ಧಕ್ಕೆ ತಯಾರಾಗಿರುವಾಗ ಇವರೂ ಗುಂಡು ಹೊಡೆಯುತ್ತಾರೆ, ಅವರೂ ಗುಂಡು ಹೊಡೆಯುತ್ತಾರೆ. ಆದರೆ ಆತ್ಮಾಹುತಿ ದಳದವರಾಗಿ ಬಂದು ರಾತ್ರೋರಾತ್ರಿ ಅವರನ್ನು ಕೊಲ್ಲುವಂಥ ಕೆಲಸ ಮಾಡಿರುವುದು, ನಿಜಕ್ಕೂ ಅದು ಖಂಡನೀಯ. ನಾವೆಲ್ಲಾ ಭಾರತೀಯರು ಅದನ್ನು ಖಂಡಿಸಬೇಕು. ಅಂತಹ ಸಂದರ್ಭದಲ್ಲಿ 18 ಜನ ತಮ್ಮನ್ನು ತಾವು ಈ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿಕೊಂಡಿದ್ದಾರೆ. ಅವರ ಆತ್ಮಕ್ಕೂ ನಾವು ಶಾಂತಿಯನ್ನು ಕೋರುತ್ತೇವೆ.

**ಸಭಾಪತಿಯವರು:–** ಇದಕ್ಕೂ ಮುಂಚೆ ನಡೆದ ಘಟನೆಯಲ್ಲಿ ಇಬ್ಬರು ಕರ್ನಾಟಕದವರು ಅಸುನೀಗಿದ್ದಾರೆ.

**ಡಾ. ಜಿ. ಪರಮೇಶ್ವರ:–** ಬೆಳಗಾವಿ ಜಿಲ್ಲೆಯ ಗೋಕಾಕ್ ಸಮೀಪದ ನಬಾಪುರ ಗ್ರಾಮದ ಶ್ರೀ ಬಸವರಾಜ ಚನ್ನಪ್ಪ ಪಾಟೀಲ ಅವರು ಏನು ಹುತಾತ್ಮರಾಗಿದ್ದಾರೆ ಅದನ್ನೂ ಸೇರಿಸಬೇಕಾಗುತ್ತದೆ. ಏಕೆಂದರೆ ಇವತ್ತು ಈ ದೇಶದಲ್ಲಿ ನಡೆಯುತ್ತಿರುವುದನ್ನು ಪ್ರಪಂಚ ಗಮನಿಸುತ್ತಿದೆ. It has been discussed in the United States' Council. They have taken note of it. ಇವತ್ತು ಭಾರತದ ವಿರುದ್ಧ ಅಂಥ ದೊಡ್ಡ ಘಟನೆಗಳು ನಡೆಯುತ್ತಿವೆ ಎಂದಾಗ ನಾವು ಅದನ್ನು ಖಂಡಿಸಬೇಕು. ಆ ಯೋಧರ ಆತ್ಮಕ್ಕೂ ನಾನು ಶಾಂತಿಯನ್ನು ಕೋರುತ್ತೇನೆ. ಒಟ್ಟಾರೆ ತಾವು ತಂದಿರುವ ಈ ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ ಎಲ್ಲಾ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಕುಟುಂಬವರ್ಗದವರಿಗೆ ಈ ನಷ್ಟವನ್ನು ಭರಿಸುವ ಶಕ್ತಿಯನ್ನು ಭಗವಂತ ಕೊಡಲಿ. It is not easy to bear that sorrow by their family. ಅದು ಬಹಳ ಕಷ್ಟವಾಗುತ್ತದೆ. ಅಂಥ ಶಕ್ತಿಯನ್ನು ಭಗವಂತ ಆ ಕುಟುಂಬಗಳಿಗೆ ಕೊಡಲಿ ಎಂದು ಹೇಳಿ ಈ ಸಂತಾಪ ಸೂಚನೆಯನ್ನು ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಾವು ಏನು ಸಂತಾಪ ಸೂಚನೆಯ ನಿರ್ಣಯವನ್ನು ತಂದಿದ್ದೀರಿ ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಮತ್ತು ಮಾಜಿ ಸಚಿವರಾಗಿದ್ದ ಶ್ರೀಯುತ ಬಸವರಾಜ ಹಾವಗಿಯಪ್ಪ ಪಾಟೀಲರು ಹಾಗೂ ವಿಧಾನ ಪರಿಷತ್ತಿನ ಹಾಗೂ ರಾಜ್ಯ ಸಭೆಯ ಮಾಜಿ ಸದಸ್ಯರಾಗಿದ್ದ ಎಫ್.ಎಂ. ಖಾನ್‌ರವರು, ಖ್ಯಾತ ನೀರಾವತಿ ತಜ್ಞರಾದ ಶ್ರೀ ಕೆ.ಸಿ. ರೆಡ್ಡಿಯವರು, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಯಶವಂತ ಬಿ. ಹೆರವಟ್ಟಾ ಹಾಗೂ ಜಮ್ಮು ಕಾಶ್ಮೀರದ ಗಡಿಯಲ್ಲಿ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ ಹುತಾತ್ಮರಾದ ಶ್ರೀ ಹಸನ್ ಸಾಬ್ ಇಮಾಮ್ ಸಾಬ್ ಖುದಾವಂತ್ ಮತ್ತು ಶ್ರೀ ಬಸವರಾಜ ಚನ್ನಪ್ಪ ಪಾಟೀಲ, ಇವರುಗಳ ನಿಧನದ ಬಗ್ಗೆ ಮಂಡನೆ ಮಾಡಿದ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸುತ್ತಾ, ಶ್ರೀಯುತ ಬಸವರಾಜ ಹಾವಗಿಯಪ್ಪ ಪಾಟೀಲರವರ ಮತ್ತು ನನ್ನ ಸಂಬಂಧ ಇತ್ತೀಚೆಗೆ ಜಾಸ್ತಿಯಾಯಿತು. ಅವರು ಬಿಜೆಪಿಗೆ ಬಂದ ನಂತರ ಯಾವ ರೀತಿ ಡಾ॥ ಪರಮೇಶ್ವರ್ ತಿಳಿಸಿದರೋ ಅದೇ ರೀತಿ ಅವರು ಬಹಳ ಸರಳ ಮತ್ತು ಸಜ್ಜನ ರಾಜಕಾರಣಿ. ನಾವು ಮಾತನಾಡುವ ಸಂದರ್ಭದಲ್ಲಿ ಅವರ ಮಾತನ್ನು ಬಹಳ ಕಿವಿಗೊಟ್ಟು ಕೇಳಬೇಕು ಅಷ್ಟು ಮೃದು ಧ್ವನಿ ಅವರದ್ದು. ಬಹಳ ಸರಳ ಸ್ವಭಾವ ಅವರದ್ದು. ಅವರು ಏನು ಹೇಳಬೇಕೋ ಅದನ್ನು ಸ್ಪಷ್ಟವಾಗಿ ಹೇಳುತ್ತಿದ್ದರು. ಸಾಮಾನ್ಯ ಜನರ ಮಧ್ಯೆ ಅವರ ಒಡನಾಟ ನೋಡಿದರೆ ನಿಜಕ್ಕೂ ನಾವೆಲ್ಲಾ ಕಲಿಯಬೇಕು. ಯಾವ ರೀತಿ ಚುನಾಯಿತ ಪ್ರತಿನಿಧಿಗಳು ಸಾಮಾನ್ಯ ಜನರ ಮಧ್ಯೆ ಇರಬೇಕೆಂಬುದನ್ನು ಅವರನ್ನು ನೋಡಿ ಕಲಿಯಬೇಕು. ಅಂಥ ಒಬ್ಬ ಸಜ್ಜನ ರಾಜಕಾರಣಿಯನ್ನು ನಾವು ಕಳೆದುಕೊಂಡಿರುವುದು ರಾಜ್ಯಕ್ಕೆ ಮತ್ತು ವೈಯಕ್ತಿಕವಾಗಿ ನಮ್ಮ ಪಕ್ಷಕ್ಕೂ ಕೂಡ ದೊಡ್ಡ ಹಾನಿಯಾಗಿದೆ ಎಂದು ತಿಳಿಸುತ್ತಾ, ಅದೇ ರೀತಿ ಶ್ರೀ ಕೆ.ಸಿ. ರೆಡ್ಡಿಯವರು ನಾನು ನೀರಾವರಿ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಒಬ್ಬ ಶ್ರೇಷ್ಠ ಅಧಿಕಾರಿ, ನುರಿತ ಅಧಿಕಾರಿ ಆಗಿದ್ದರು. ಎಷ್ಟರ ಮಟ್ಟಿಗೆ ಅವರಿಗೆ ಅನುಭವವಿತ್ತೆಂದರೆ ಯಾವುದೇ ಅಂಶಗಳನ್ನು ನಮ್ಮಲ್ಲಿ ಹೇಳುವುದಕ್ಕಿಂತ ಮುಂಚೆ ಅವರು ಶೇ.100 ರಷ್ಟು ಪಕ್ಕಾ ಆದ ಮೇಲೆ ನಮ್ಮಲ್ಲಿ ಬಂದು ಹೇಳುತ್ತಿದ್ದರು. ಅನೇಕ ಅಧಿಕಾರಿಗಳಿಗೆ ನಾವು ಹೇಳಿಕೊಡಬೇಕು. ಶ್ರೀ ಕೆ.ಸಿ. ರೆಡ್ಡಿ ಹಾಗಲ್ಲ. ವಿಶೇಷವಾಗಿ ಭದ್ರಾ ಮೇಲ್ದಂಡೆ ಯೋಜನೆ ಕೆಲಸ ಏನು ನಡೆಯುತ್ತಿದೆ ಅದರ ಮೂಲ ಪುರುಷ ಶ್ರೀ ಕೆ.ಸಿ. ರೆಡ್ಡಿ ಎಂದರೆ ತಪ್ಪಾಗಲಾರದು. ಶ್ರೀ ನಿಜಲಿಂಗಪ್ಪ ನವರ ಕನಸನ್ನು ಏನಾದರೂ ಮಾಡಿ ನನಸು ಮಾಡಬೇಕೆಂಬ ಒಂದು ಆಸಕ್ತಿಯನ್ನು ತೋರಿದ ಒಬ್ಬ ಮಹಾ ಪುರುಷ ಇವರು. ಇಡೀ ರಾಜ್ಯದಲ್ಲಿ ನೀರಿನ ಸಮಸ್ಯೆ ಇದ್ದಾಗ ಎಲ್ಲಿಂದ ನೀರನ್ನು ತೆಗೆದುಕೊಂಡು ಹೋದರೆ ಅನುಕೂಲವಾಗುತ್ತದೆ ಎಂಬ ಬಗ್ಗೆ ಎಲ್ಲಾ ಅಧಿಕಾರಿಗಳ ಜೊತೆ ಕುಳಿತು ಚರ್ಚೆ ಮಾಡಿ ಅದನ್ನು ಮಂಡಿಸುತ್ತಿದ್ದರು.

ಎಲ್ಲಾ ಅಂಶಗಳಲ್ಲೂ ಕೂಡ ಯಾವ್ಯಾವ ತಾಲ್ಲೂಕುಗಳಿಗೆ ನೀರು ಹೋಗಬೇಕು, ಇಡೀ ರಾಜ್ಯದಲ್ಲಿ ನೀರಿನ ಸಮಸ್ಯೆ ಇದ್ದರೂ ಕೂಡ ಎಲ್ಲೆಲ್ಲಿಂದ ನೀರು ತೆಗೆದುಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ ಎನ್ನುವುದರ

ಬಗ್ಗೆ ಸ್ಪಷ್ಟವಾಗಿ ಅವರು ಎಲ್ಲಾ ಅಧಿಕಾರಿಗಳ ಜೊತೆಯಲ್ಲಿ ಕುಳಿತು ಚರ್ಚೆ ಮಾಡಿ ಅದನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ಬಹಳ ಸಂತೋಷವಾಗುತ್ತಿತ್ತು. ಆ ಭಾಗದಲ್ಲಿ ಎಲ್ಲಿಂದ ನೀರು ಪ್ರಾರಂಭವಾಗುತ್ತದೆ ಎಲ್ಲಿ ನೀರು ಮುಟ್ಟಬೇಕು ಎಂಬುದನ್ನು ತಿಳಿಸುವುದಕ್ಕೆ ಅವರು ನಮ್ಮನ್ನು ಎಲ್ಲಾ ತಾಲ್ಲೂಕುಗಳಿಗೂ ಕರೆದುಕೊಂಡು ಹೋದರು. ನೀರು ಹೇಗೆ ಬರಬೇಕು, ನಮಗೆ ಎಷ್ಟು ನೀರು ಸಿಗುತ್ತದೆ, ಅದರಲ್ಲಿ ಕುಡಿಯುವ ನೀರಿಗೆ ಎಷ್ಟು, ರೈತರಿಗೆ ಎಷ್ಟು ನೀರು ಸಿಗುತ್ತದೆ ಎಂದು ನಮಗೆ ತಿಳಿಸುತ್ತಿದ್ದರು. ಅವರ ಜೊತೆ ಕೆಲಸ ಮಾಡುವುದಕ್ಕೆ ನಮಗೆ ಬಹಳ ಆನಂದವಾಗುತ್ತಿತ್ತು. ಅಂತಹ ಒಬ್ಬ ನೀರಾವರಿ ತಜ್ಞರನ್ನು ನಾವು ಕಳೆದುಕೊಂಡಿದ್ದೇವೆ ಎಂಬುದನ್ನು ಯಾವ ರೂಪದಲ್ಲಿ ಹೇಳಬೇಕೋ ಅದು ನನಗೆ ಅರ್ಥವಾಗುತ್ತಿಲ್ಲ. ಅವರು ಬಹಳ ದಕ್ಷ ಆಡಳಿತಗಾರರು, ಯಾವುದೇ ಒಂದು ವಿಚಾರಕ್ಕೂ ಮುಲಾಜಿಲ್ಲದೆ ಸ್ಪಷ್ಟ ಮಾರ್ಗದರ್ಶನ ಮಾಡತಕ್ಕಂಥ ಒಬ್ಬ ವ್ಯಕ್ತಿಯನ್ನು ನಾವು ಇವತ್ತು ಕಳೆದಕೊಂಡಿದ್ದೇವೆ.

ಅದೇ ರೀತಿ ರಾಜ್ಯಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಫ್.ಎಂ.ಖಾನ್‌ರವರು, ಜಮ್ಮು–ಕಾಶ್ಮೀರ ಗಡಿ ಭಾಗದಲ್ಲಿ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ ಶ್ರೀ ಹಸನ್‌ಸಾಬ್ ಇಮಾಮ್‌ಸಾಬ್ ಖುದಾವಂದ್, ಶ್ರೀ ಬಸವರಾಜ ಚನ್ನಪ್ಪ ಪಾಟೀಲ ಯೋಧರುಗಳು, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಯಶವಂತ ಬಿ.ಹೆರವಟ್ಟಾರವರು ನಿಧನರಾಗಿರುವುದಕ್ಕೆ ನಾನು ವಿಷಾದ ವ್ಯಕ್ತ ಮಾಡುತ್ತೇನೆ.

ಇದರ ಜೊತೆಗೆ ಮೊನ್ನೆ ನಡೆದಂತಹ ಜಮ್ಮು–ಕಾಶ್ಮೀರದ ಬಾರಾಮುಲ್ಲಾದಲ್ಲಿರುವ ಉರಿ ಸೇನಾ ಪ್ರಧಾನ ಕಛೇರಿ ಬಳಿ ಇರುವ ಬೆಟಾಲಿಯನ್ ಶಿಬಿರದ ಮೇಲೆ ಶಸ್ತ್ರಸಜ್ಜಿತ ಉಗ್ರರು ನಡೆಸಿದ ದಾಳಿಯಲ್ಲಿ ಸೈನಿಕರ ಕಗ್ಗೊಲೆಯನ್ನು ಇವತ್ತು ಇಡೀ ಪ್ರಪಂಚ ಖಂಡನೆ ಮಾಡುತ್ತಿದೆ. ಇವತ್ತು ಖಂಡನೆ ಮಾಡುತ್ತಿರುವಂತಹ ಸಂದರ್ಭದಲ್ಲಿ ಪಾಕಿಸ್ತಾನದ ದುಷ್ಕೃತ್ಯ ಹೇಡಿತನ ಎಂದು ಕಾಣುತ್ತದೆ. ಏಕೆಂದರೆ, ಯಾವುದೇ ಒಂದು ಯುದ್ಧ ಆಗುವಂತಹ ಸಂದರ್ಭದಲ್ಲಿ ಮುಖಾಮುಖಿಯಾಗಿ ಹೋರಾಟ ಮಾಡುವುದು ಒಂದು ವ್ಯವಸ್ಥೆ. ಆದರೆ ಇವತ್ತು ಮಲಗಿರುವಂತಹ ಸಂದರ್ಭದಲ್ಲಿ ಪಾಕಿಸ್ತಾನದ ಉಗ್ರಗಾಮಿಗಳು ನುಗ್ಗಿ ನಮ್ಮ ರಾಷ್ಟ್ರಭಕ್ತ ವೀರ ಯೋಧರ ಕಗ್ಗೊಲೆ ಏನು ನಡೆದಿದೆ ಇದು ಹೇಡಿತನ. ಈ ಕೃತ್ಯವನ್ನು ಇಡೀ ಪ್ರಪಂಚವೇ ಖಂಡನೆ ಮಾಡುತ್ತಿದೆ. ಪಾಕಿಸ್ತಾನ ಕೂಡ ಒಂದು ಭಯೋತ್ಪಾದಕ ರಾಷ್ಟ್ರ ಎನ್ನುವ ರೂಪದಲ್ಲಿ ವರ್ತಿಸುತ್ತಿದೆ. ವೈಯಕ್ತಿಕವಾಗಿ ಪ್ರತ್ಯೇಕವಾಗಿ ಅದೊಂದೇ ರಾಷ್ಟ್ರ ಒಂದು, ಇಡೀ ಪ್ರಪಂಚ ಒಂದು ಎನ್ನುವ ರೀತಿಯಲ್ಲಿ ತರುತ್ತಿದೆ. ಜಮ್ಮು–ಕಾಶ್ಮೀರದ ಬಾರಾಮುಲ್ಲಾದಲ್ಲಿರುವ ಉರಿ ಸೇನಾ ಪ್ರಧಾನ ಕಛೇರಿ ಬಳಿ ಇರುವ ಬೆಟಾಲಿಯನ್ ಶಿಬಿರದ ಮೇಲೆ ಶಸ್ತ್ರಸಜ್ಜಿತ ಉಗ್ರರು ನಡೆಸಿದ ದಾಳಿಯಲ್ಲಿ ಸೈನಿಕರ ಹತ್ಯೆಯಾಗಿದೆ. ಆ ರಾಷ್ಟ್ರಭಕ್ತರ ಕುಟುಂಬಗಳಿಗೂ ಸದನದಲ್ಲಿ ಸಂತಾಪ ಸೂಚಿಸುವ ದಿಕ್ಕಿನಲ್ಲಿ ತಾವು ಮಂಡನೆ ಮಾಡಬೇಕೆನ್ನುವ ವಿಚಾರವನ್ನು ತಿಳಿಸುತ್ತೇನೆ. ತಾವೇನು ಇವತ್ತು ಸಂತಾಪ ಸೂಚನೆಯನ್ನು ಮಂಡನೆ ಮಾಡಿದ್ದೀರಿ ಈ ಎಲ್ಲಾ ಅಂಶಗಳ ಬಗ್ಗೆ ನಾನು ವೈಯಕ್ತಿಕವಾಗಿ ಮತ್ತು ನಮ್ಮ ಸದನದ ಪರವಾಗಿ ಅವರ ಸಾವಿಗೆ ಅವರಿಗೆ ಶೋಕವನ್ನು ವ್ಯಕ್ತಪಡಿಸುತ್ತಾ ಅವರ ಕುಟುಂಬಗಳಿಗೆ ಈ ದುಃಖವನ್ನು ಭರಿಸುವಂತಹ ಶಕ್ತಿ ಕೊಡಲಿ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

**ಸಭಾಪತಿಯವರು:–** 'ಉರಿ' ಭಾಗದಲ್ಲಿ ನಡೆದ ದುರ್ಘಟನೆಯಲ್ಲಿ ಮಡಿದ ಯೋಧರೆಲ್ಲರಿಗೂ ಕೂಡ ಈ ಸದನ ಸಂತಾಪ ಸೂಚಿಸುತ್ತದೆ. ಈಗ ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ ಅವರ ಅಗಲಿಕೆಯ ನೋವನ್ನು ಸಹಿಸುವಂತಹ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರು:–** ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

## 2.ವರದಿಯನ್ನೊಪ್ಪಿಸುವುದು

**ಶ್ರೀ ಡಿ.ಎಸ್.ವೀರಯ್ಯ(ಮಾನ್ಯ ಸದಸ್ಯರು, ಕರ್ನಾಟಕ ವಿಧಾನಮಂಡಲದ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಸಮಿತಿ):–** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಧಾನಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 31ನೇ ವರದಿಯನ್ನು ಸದನದಲ್ಲಿ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:–** ವರದಿಯನ್ನೊಪ್ಪಿಸಲಾಯಿತು.

## 03. ವಿಶೇಷ ಸದನ ಸಮಿತಿಯ ಕಾಲಾವಕಾಶ ವಿಸ್ತರಿಸುವ ಪ್ರಸ್ತಾವ

**ಡಾ:ಜಿ.ಪರಮೇಶ್ವರ್(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ದಿನಾಂಕ:30ನೇ ಸೆಪ್ಟೆಂಬರ್ 2016 ರವರೆಗೆ ವಿಸ್ತರಿಸಲಾಗಿದ್ದ **"**ಭೋವಿ ಮತ್ತು ವಡ್ಡರ್ ಸಮುದಾಯಗಳ ಜನರಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡದಿರುವ ಬಗ್ಗೆ ಪರಿಶೀಲಿಸಲು ರಚಿಸಲಾಗಿರುವ ವಿಧಾನ ಪರಿಷತ್ತಿನ ವಿಶೇಷ ಸದನ ಸಮಿತಿಯ**"** ತನ್ನ ವರದಿಯನ್ನು ಸಲ್ಲಿಸಲು ದಿನಾಂಕ:31ನೇ ಅಕ್ಟೋಬರ್ 2016 ರವರೆಗೆ (01 ತಿಂಗಳವರೆಗೆ) ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾವನೆಯನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

**"**ಭೋವಿ ಮತ್ತು ವಡ್ಡರ್ ಸಮುದಾಯಗಳ ಜನರಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡದಿರುವ ಬಗ್ಗೆ ಪರಿಶೀಲಿಸಲು ರಚಿಸಲಾಗಿರುವ ವಿಧಾನ ಪರಿಷತ್ತಿನ ವಿಶೇಷ ಸದನ ಸಮಿತಿಯ**"** ಕಾಲಾವಕಾಶವನ್ನು ವಿಸ್ತರಿಸುವುದು.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಕಾಲಾವಕಾಶ ಏಕೆ ಕೊಡುತ್ತಿದ್ದೀರಿ. Let us close it as early as possible.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಪ್ರತಿ ಬಾರಿ ಈ ರೀತಿ ಆಗುತ್ತಿದೆ. ಅವರಿಗೆ ದಯವಿಟ್ಟು deadline ಕೊಡಿ. ಸಮಿತಿ ರಚನೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು ಭೋವಿ ಜನಾಂಗದವರಿಗೆ ಅನ್ಯಾಯವಾಗುತ್ತಿದೆ ಎಂದು ಗೊತ್ತಿದ್ದೂ ಅದನ್ನು ವಿಸ್ತರಿಸುತ್ತಾ ಹೋಗುವುದು ಸರಿಯಲ್ಲ. ಇದು ಖಂಡಿತ ಸರಿಯಿಲ್ಲ. ಇಷ್ಟು ಸಮಯದೊಳಗೆ ಆಗಲೇಬೇಕೆಂದು ತಾವು deadline ನಿಗದಿ ಪಡಿಸಿ, ಸೂಚನೆ ಕೊಡಬೇಕು.

**ಸಭಾಪತಿಯವರು:–** ಒಂದು ತಿಂಗಳೊಳಗೆ ವರದಿಯನ್ನು ಕೊಡಿಸುವುದಾಗಿ ಮಾನ್ಯ ಸಭಾನಾಯಕರು ಹೇಳಿದ್ದಾರೆ.

**ಡಾ:ಜಿ.ಪರಮೇಶ್ವರ್:–** ವರದಿಯನ್ನು ಸಲ್ಲಿಸುವುದಕ್ಕೆ ಒಂದು ತಿಂಗಳು ಕಾಲಾವಕಾಶವನ್ನು ಸಮಿತಿಯವರಿಗೆ ಕೊಟ್ಟಿದ್ದೇವೆ.

**ಸಭಾಪತಿಯವರು:–** ಈ ವಿಷಯಕ್ಕೆ ಸದನದ ಅನುಮತಿ ಇದೆ ಎಂದು ನಾನು ಭಾವಿಸುತ್ತೇನೆ.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಸದನದ ಅನುಮೋದನೆ ದೊರೆಯಿತು**

**<u>04. ಸಭೆಯ ಮುಂದಿಡಲಾದ ಕಾಗದ ಪತ್ರಗಳು</u>**

**ಕಾರ್ಯದರ್ಶಿ, ಕ.ವಿ.ಪ.:–** ಮಾನ್ಯ ಸಭಾಪತಿಯವರ ಅನುಮತಿಯೊಂದಿಗೆ ಕಳೆದ ಅಧಿವೇಶನದ ನಂತರ ಮಾನ್ಯ ರಾಜ್ಯಪಾಲರಿಂದ ಅಂಗೀಕಾರಗೊಂಡ ಈ ಕೆಳಕಂಡ ವಿಧೇಯಕಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

(ಪ್ರತಿಯನ್ನು ಲಗತ್ತಿಸಲಾಗಿದೆ)

20

**ಸಭಾಪತಿಯವರು:–** ಈಗ ಕಾವೇರಿ ನದಿ ನೀರಿನ ಬಿಕ್ಕಟ್ಟಿನ ಕುರಿತು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ನಿರ್ಣಯವನ್ನು ಶ್ರೀಯುತ ಎಸ್.ರವಿಯವರು ಮಂಡಿಸುತ್ತಾರೆ.

**05. ಕಾವೇರಿ ನದಿ ನೀರಿನ ಬಿಕ್ಕಟ್ಟಿನ ಕುರಿತು ನಿರ್ಣಯ ಮಂಡನೆ**

**<u>ನಿರ್ಣಯ</u>**

**ವಿಷಯ:** ಕರ್ನಾಟಕ ರಾಜ್ಯದಲ್ಲಿ ವಾಸವಾಗಿರುವ ಜನರ ಹಿತಾಸಕ್ತಿಯನ್ನು ಪರಿಗಣಿಸಿ, ಕಾವೇರಿ ಕೊಳ್ಳದ ನಾಲ್ಕೂ ಜಲಾಶಯಗಳಲ್ಲಿ ಹಾಲಿ ಇರುವ ಒಟ್ಟಾರೆ ಜಲಸಂಗ್ರಹಣೆಯಾಗಿರುವ ನೀರನ್ನು ಬೆಂಗಳೂರು ಮಹಾನಗರವೂ ಸೇರಿದಂತೆ, ಕಾವೇರಿ ಕೊಳ್ಳದ ಜನರಿಗೆ ಮೂಲಭೂತ ಅವಶ್ಯಕವಾದ ಕುಡಿಯುವ ನೀರನ್ನು ಒದಗಿಸುವ ಉದ್ದೇಶಕ್ಕಾಗಿ ಹಾಗೆಯೇ ಸಂಪೂರ್ಣವಾಗಿ ಉಳಿಸಿಕೊಳ್ಳಲು ಮತ್ತು ಇದಕ್ಕೆ ಹೊರತಾದ ಬೇರೆ ಯಾವುದೇ ಕಾರಣಕ್ಕೂ ಒದಗಿಸಲು ಸಾಧ್ಯವಿಲ್ಲವೆಂಬ ವಿಷಯದ ಬಗ್ಗೆ.

-----

**ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಸದನದ ಅಂಗೀಕಾರಕ್ಕಾಗಿ ಈ ಕೆಳಕಂಡ ನಿರ್ಣಯವನ್ನು ಮಂಡಿಸುತ್ತಿದ್ದೇನೆ.

***"2016–17 ನೇ ಜಲವರ್ಷದಲ್ಲಿ ಸಂಕಷ್ಟದ ತೀವ್ರ ಗಂಭೀರ ಪರಿಸ್ಥಿತಿ ಇರುವುದನ್ನು, ಈ ಸದನವು ತೀವ್ರ ಆತಂಕದಿಂದ ಗಮನಿಸಿದೆ. ಆದರೆ ನೀರಿನ ಕೊರತೆಯ ಪ್ರಮಾಣವೇನು ಎಂಬುದು ಈ ಋತುವಿನ ಅಂತ್ಯ ಅಂದರೆ, ದಿನಾಂಕ:31.01.2017ರ ನಂತರವೇ ಸ್ಪಷ್ಟವಾಗಿ ತಿಳಿಯಲಿದೆ ಎಂಬುದನ್ನೂ, ಈ ಸದನ ಗಮನಿಸಿದೆ.***

***ಕಾವೇರಿ ಕೊಳ್ಳದ ನಾಲ್ಕು ಜಲಾಶಯಗಳಾದ ಕೃಷ್ಣರಾಜ ಸಾಗರ, ಹೇಮಾವತಿ, ಹಾರಂಗಿ ಮತ್ತು ಕಬಿನಿ – ಇವುಗಳಲ್ಲಿ ನೀರಿನ ಮಟ್ಟ ಅತ್ಯಂತ ತಳಮಟ್ಟದ ಹಂತವನ್ನು, ತಲುಪಿರುವುದನ್ನು, ಮತ್ತು ಕೇವಲ 27.6 ಟಿ.ಎಂ.ಸಿ. ಮಾತ್ರ ನೀರು ಇರುವುದನ್ನು, ಈ ಸದನವು ಆತಂಕದಿಂದ ಪರಿಗಣಿಸಿದೆ.***

*ಈ ಗಂಭೀರ ಮತ್ತು ಆತಂಕಕಾರಿ ವಾಸ್ತವ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಬೆಂಗಳೂರು ಮಹಾನಗರವೂ ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿನ ಪಟ್ಟಣಗಳು ಹಾಗೂ ಹಳ್ಳಿಗಳ ಕುಡಿಯುವ ನೀರಿನ ಅವಶ್ಯಕತೆಗಳಿಗಾಗಿ ಮಾತ್ರ ಈಗಿರುವ ನಾಲ್ಕೂ ಜಲಾಶಯಗಳ ಒಟ್ಟಾರೆ ಜಲಸಂಗ್ರಹಣೆಯಿಂದ ನೀರನ್ನು ಬಳಸಬೇಕೆಂದು ಸರ್ಕಾರಕ್ಕೆ ಈ ಸದನವು ಈ ನಿರ್ಣಯದ ಮೂಲಕ ನಿರ್ದೇಶಿಸುತ್ತದೆ.*

*ಹಾಗಾಗಿ ಕರ್ನಾಟಕ ರಾಜ್ಯದಲ್ಲಿ ವಾಸವಾಗಿರುವ ಜನರ ಹಿತಾಸಕ್ತಿಯನ್ನು ಪರಿಗಣಿಸಿ ಕಾವೇರಿ ಕೊಳ್ಳದ ನಾಲ್ಕೂ ಜಲಾಶಯಗಳಲ್ಲಿ ಹಾಲಿ ಇರುವ ಒಟ್ಟಾರೆ ಜಲಸಂಗ್ರಹಣೆಯಾಗಿರುವ ನೀರನ್ನು, ಬೆಂಗಳೂರು ಮಹಾನಗರವೂ ಸೇರಿದಂತೆ, ಕಾವೇರಿ ಕೊಳ್ಳದ ಜನರಿಗೆ ಮೂಲಭೂತ ಅವಶ್ಯಕವಾದ ಕುಡಿಯುವ ನೀರನ್ನು, ಒದಗಿಸುವ ಉದ್ದೇಶಕ್ಕಾಗಿ ಹಾಗೆಯೇ ಸಂಪೂರ್ಣವಾಗಿ ಉಳಿಸಿಕೊಳ್ಳಲು ಮತ್ತು ಇದಕ್ಕೆ ಹೊರತಾದ ಬೇರೆ ಯಾವುದೇ ಕಾರಣಕ್ಕೂ ಒದಗಿಸಲು ಸಾಧ್ಯವಿಲ್ಲವೆಂಬ ನಿರ್ಣಯವನ್ನು, ಈ ಸದನವು ಸರ್ವಾನುಮತದಿಂದ ಅಂಗೀಕರಿಸಬೇಕೆಂದು" ತಮ್ಮ ಮುಖಾಂತರ ಗೌರವಾನ್ವಿತ ಸದಸ್ಯರುಗಳನ್ನು ವಿನಂತಿಸಿಕೊಳ್ಳುತ್ತಾ  ನಾನು ಈ ನಿರ್ಣಯವನ್ನು ಮಂಡಿಸುತ್ತಿದ್ದೇನೆ.*

## RESOLUTION

**Sri S.Ravi, Member of Karnataka Legislative Council**

**(Local Authorities Constituency) moved that:-**

*"This House Notes: that in the water year 2016-17 there has been an acute situation of distress, but the short fall in the basin will become known only at the end of the season (31-01-2017);*

*This House further seriously notes that the combined storages in the four reservoirs viz., Krishna Raja Sagara, Hemavathy, Harangi and Kabini have reached alarmingly low levels with only 27.6 TMC of water; and*

*It is now resolved to direct that in this state of acute distress it is imperative that the Government ensures that no water from the present storages be drawn, save and except for meeting drinking water requirements of the villages and towns in the Cauvery basin and for the entire city of Bruhat Bangalore.*

*The above resolution is unanimously passed after carefully considering the needs of the inhabitants of the State of Karnataka whose interests are likely to be gravely jeopardized if water in the four reservoirs is in any way reduced – other than for meeting the drinking water requirements of inhabitants in the Cauvery basin including the entire city of Bangalore."*

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಪರಿಸ್ಥಿತಿಯ ತೀವ್ರತೆಯನ್ನು ಅರ್ಥ ಮಾಡಿಕೊಂಡಿರತಕ್ಕಂಥ ಸನ್ನಿವೇಶದಲ್ಲಿ ಸದನದ ಪರವಾಗಿ ಮಾನ್ಯ ಸದಸ್ಯರು ಏನು ಈ ನಿರ್ಣಯವನ್ನು ಮಂಡನೆ ಮಾಡಿದ್ದಾರೆ, ಈ ನಿರ್ಣಯವನ್ನು ನಾನು ಒಮ್ಮನಸ್ಸಿನಿಂದ, ಒಕ್ಕೊರಲಿನಿಂದ ಅನುಮೋದನೆಯನ್ನು ಮಾಡುತ್ತೇನೆ.

**ನಿರ್ಣಯವನ್ನು ಮಂಡಿಸಲಾಯಿತು**

**ಶ್ರೀ ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಇತಿಹಾಸದಲ್ಲೇ ಈ ರೀತಿಯ ನಿರ್ಣಯವನ್ನು ಸರ್ವಾನುಮತದಿಂದ ಈ ರೀತಿ ವಿಚಾರಗಳಿಗೆ ಸರ್ವಾನುಮತ ಅವಕಾಶ ಒಂದು ಸಂದರ್ಭ ನಿಜಕ್ಕೂ ಕೂಡ ಶೋಚನೀಯ. ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ಕುಡಿಯುವುದಕ್ಕೆ ನೀರಿಲ್ಲ ಅದನ್ನು ಸರ್ವಾನುಮತದಿಂದ ಅಂಗೀಕಾರ ಮಾಡಬೇಕು. ಕುಡಿಯುವ ನೀರನ್ನು ಬೇರೆ ಯಾರಿಗೂ ಬಿಡುವುದಕ್ಕಾಗುವುದಿಲ್ಲ. ಇಂತಹ ಪರಿಸ್ಥಿತಿಯನ್ನು ದುದೈವ ಇದು. ನಾನು ಯಾರಿಗೂ ಕೂಡ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಕುಡಿಯುವ ನೀರಿಗೆ ನಮ್ಮ ಕೆಆರ್‌ಎಸ್, ಹೇಮಾವತಿ, ಹಾರಂಗಿ, ಕಬಿನಿ ಈ ಎಲ್ಲ ಕಡೆಯು ಕೂಡ ಕುಡಿಯುವ ನೀರಿಗೆ 27.6 ಟಿಎಂಸಿ ನೀರು ಇರುವುದನ್ನು ಈ ಆತಂಕದಿಂದ ನಾವು ಒಪ್ಪಿಕೊಳ್ಳುತ್ತಿದ್ದೇವೆ. ಬೆಂಗಳೂರು ಸೇರಿ ಉಳಿದಂತಹ ಪಟ್ಟಣಗಳಿಗೆ ಕುಡಿಯುವ ನೀರನ್ನು ಕಾವೇರಿ ನಮ್ಮಲ್ಲೇ ಹುಟ್ಟಿ ಇಲ್ಲೇ ಹರಿಯುವಂತಹ ಸಂದರ್ಭದಲ್ಲಿ ನಮಗೆ ನೀರುಇಲ್ಲ. ಕುಡಿಯುವುದಕ್ಕೆ ಅವಕಾಶ ಮಾಡಿಕೊಡಿ ಅನುವಂತಹ ಒಂದು ಪರಿಸ್ಥಿತಿ ಸರ್ವಾನುಮತದಿಂದ ವಿಧಾನಮಂಡಲದಲ್ಲಿ ತೀರ್ಮಾನ ಮಾಡಬೇಕಾದ ಪರಿಸ್ಥಿತಿ ಬಂದಿದೆ ಅಂದರೆ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಸುಪ್ರೀಂಕೋರ್ಟ್ ತೀರ್ಪು ಕೊಟ್ಟ ಮೇಲೆ 15,000 ಕ್ಯೂಸೆಕ್ ನೀರು ಕೊಟ್ಟಿದ್ದೇವೆ. ನಂತರ 12,000 ಕ್ಯೂಸೆಕ್ ನೀರು ಕೊಟ್ಟಿದ್ದೇವೆ. ಆದಾದ ನಂತರ 3,000 ಮತ್ತೆ 6,000 ಕ್ಯೂಸೆಕ್ ನೀರು ಕೇಳುತ್ತಿದ್ದಾರೆ. ಎಲ್ಲಿಂದ ಕೊಡುವುದು. ಕರ್ನಾಟಕ–ತಮಿಳುನಾಡು ಜಿಲ್ಲೆಗಳು ಅಣ್ಣ–ತಮ್ಮಂದಿರು ಇದ್ದ ಹಾಗೆ. ಯಾವಾಗ ಯಾವಾಗ ನಮ್ಮ ಹತ್ತಿರ ನೀರು ಇದೆಯೋ ಅವರು ಕೇಳಿದ್ದೇನೆ ತಮಿಳುನಾಡಿಗೆ ನೀರು ಬಿಡುತ್ತಾ ಹೋಗಿದ್ದೇವೆ. ಆದರೆ ಇವತ್ತಿನ ಪರಿಸ್ಥಿತಿ ಏನು ಅಂದರೆ ಸುಪ್ರೀಂಕೋರ್ಟ್‌ಗೆ ವಾಸ್ತವತೆ ಅರ್ಥ ಮಾಡಿಕೊಳ್ಳುವುದಕ್ಕೆ ಸ್ವಲ್ಪ ವ್ಯತ್ಯಾಸ ವಾಗಿದ್ದೀಯಾ. ನಮಗೆ ಕುಡಿಯುವ ನೀರು ಇದ್ದು ನೀರನ್ನು ಬೆಳೆಗೆ ಕೇಳುತ್ತಿಲ್ಲ. ಎಂತಹ ದುರ್ದೈವ ಅಂದರೆ ಭತ್ತ ಒಣಗುತ್ತಿದೆ, ರೈತರಿಗೆ ಉಚಿತವಾಗಿ ಭತ್ತದ ಬೀಜ ಕೊಟ್ಟಿದ್ದೇವೆ. ಗೊಬ್ಬರ ಕೊಟ್ಟಿದ್ದೇವೆ. ಆದರೆ ರೈತರಿಗೆ ಕುಡಿಯುವ ನೀರು ಇಲ್ಲ ಅಂದರೆ ಎಲ್ಲ ಸುಟ್ಟು ಹೋಗುತ್ತಿದೆ. ಇಂತಹ ಸಂದರ್ಭದಲ್ಲಿ ನಮಗೆ ನೀರು ಇಲ್ಲಪ್ಪಾ ಅಂದರೆ ನೀರು ಬಿಡಬೇಕು ಅಂದರೆ ರೈತರು ಎಷ್ಟು ಆಕ್ರೋಶಕ್ಕೆ ಒಳಗಾದರು. ಆಕ್ರೋಶ ಅಂದರೆ ನನಗೆ ಗೊತ್ತಿರುವ ಹಾಗೆ ಚಿಕ್ಕ ವಯಸ್ಸಿನಿಂದ ಅನೇಕ ಬಾರಿ ಈ ಕಾವೇರಿ ವಿಚಾರಕ್ಕೆ ಗಲಾಟೆಯಾಗಿರುವುದು ನೋಡಿದ್ದೇವೆ. ಕಡಿಮೆ ಅಂದರೂ ಈ ಬಾರಿ 40,000 ಕೋಟಿ ನಷ್ಟವಾಗಿದೆ. ಬಸ್ಸುಗಳು ಸುಟ್ಟಿದ್ದು ಇರಬಹುದು. ರೈತರು ದುಡ್ಡೇ ರೈತರೇ ಸುಟ್ಟಿಕೊಂಡಂತಹ ಪರಿಸ್ಥಿತಿ ಬಂದಿದೆ. ಕರ್ನಾಟಕ ರಾಜ್ಯದ ಜನರು ಒಂದು ರೀತಿಯಲ್ಲಿ ಅತ್ಮಹತ್ಯೆ ಮಾಡಿಕೊಂಡಿರುವಂತ ಹಪರಿಸ್ಥಿತಿಯಾಗಿದೆ. ರೂ.40,000 ಕೋಟಿ ಹಣ ನಮ್ಮ ದುಡ್ಡನ್ನೇ ನಾವೇ ಸುಟ್ಟುಕೊಂಡಿದ್ದೀವಿ ಅಂದರೆ ನಮ್ಮದೇ ಸೀಮೆಎಣ್ಣೆಗೆ ಬೆಂಕಿ ಹಚ್ಚಿ ಸುಟ್ಟಿಕೊಂಡಂತಹ ಪರಿಸ್ಥಿತಿಯಾಗಿದ್ದು, ಪ್ರಾಣವನ್ನು ಕಳೆದುಕೊಂಡಿಲ್ಲ. ಯಾರ್ಯಾರೋ ಒಬ್ಬಬ್ಬೊರು ಪ್ರಾಣ ಕಳೆದುಕೊಂಡಿದ್ದಾರೆ. ಇದನ್ನು ಯಾವ ರೂಪದಲ್ಲಿ ಯಾರನ್ನ ಒಪ್ಪಿಸಬೇಕು. ಹೇಗೆ ಒಪ್ಪಿಸಬೇಕು ಎಂದು ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾಗುತ್ತದೆ. ಏಕೆಂದರೆ ಕರ್ನಾಟಕದ ಜನರು ಯಾವತ್ತೂ ಧಾರಳವಾಗಿಯೇ ಇದ್ದೇವೆ. ನಮ್ಮ ಧಾರಳತನಕ್ಕೆ ಎಂದೆಂದು ಕಡಿಮೆಯಾಗಿಲ್ಲ. ಕುಡಿಯುವ ನೀರನ್ನು ನಮ್ಮ ಬೆಳೆಗೆ ಕೇಳುತ್ತಿಲ್ಲ. ಸಾಂಬಾ ಬೆಳೆಗೆ ಕೇಳುತ್ತಿದ್ದಾರೆ. ಹಳ್ಳಿಯಲ್ಲಿರುವ ಅನಕ್ಷಸ್ಥರನ್ನು ಕೇಳಿದರೆ ನಿನಗೆ ಕುಡಿಯುವುದಕ್ಕೆ ನೀರು ಇಲ್ಲ. ಅವರ ಮುಂದಿನ ಬೆಳೆಗೆ ನೀರು ಕೊಡಬೇಕಾಗುತ್ತದೆ ಇಂತಹ ಪರಿಸ್ಥಿತಿ ಬಂದಂತಹ ಸಂಧರ್ಭದಲ್ಲಿ ಯಾಕೆ ಅಂತ ಕೇಳುತ್ತಾನೆ ಅವನು ನಗುತ್ತಾನೆ. ಕಾವೇರಿ ರಾಜ್ಯದ ಕಾವೇರಿನ ನಮಗೆ ಕುಡಿಯುವುದಕ್ಕೆ ನೀರು ಇಲ್ಲ ತಮಿಳುನಾಡಿಗೆ ನೀರುಕೊಡುತ್ತೀರಿ ಅಂದರೆ ಸುಪ್ರೀಂಕೋರ್ಟ್‌ಏನು ಹೇಳುತ್ತದೆ. ನಮ್ಮ ನ್ಯಾಯಾಧೀಕರಣ ಏನು ಹೇಳುತ್ತದೆ. ನಮ್ಮ ವಕೀಲರು ಏನು ವಾದ ಮಾಡಿದ್ದಾರೆಅದು ಏನು ಅವನಿಗೆ ಗೊತ್ತಾಗುವುದಿಲ್ಲ.

ಇಂತಹಒಂದು ದುಸ್ಥಿತಿಯಲ್ಲಿ ನಾನು ಏನು ಮಾತಾಡಬೇಕು ಏನು ಬಿಡಬೇಕು ಅಂಥ ಏನು ಗೊತ್ತಾಗಲ್ಲ. ಆದರೆತುಂಬಾ ಸ್ಪಷ್ಟವಾಗಿ ಸರ್ಕಾರದ ಜೊತೆ ನಾವು ಖಂಡಿತವಾಗಿ ಇರುತ್ತೇವೆ. ಯಾವುದೇ ಕಾರಣಕ್ಕೂ ಕೂಡ ನಾವು ಈ ಒಂದು ವಿಚಾರದಲ್ಲಿರಾಜಕಾರಣ ಮಾಡುವುದಕ್ಕೆ ನಾವು ತಯಾರುಇಲ್ಲ. ನಾವು ಮೊನ್ನೆ ಮೀಟಿಂಗ್‌ಗೆ ಹೋಗಲಿಲ್ಲ ನಿಜ. ಏಕೆಂದರೆಎರಡು ಸಭೆಗಳಿಗೆ ಕರೆದಿದ್ದರೂ ಆ ಸಭೆಯಲ್ಲೇ ಹೇಳಿದ್ದೇವೆ ದಯವಿಟ್ಟು ನೀರನ್ನು ಬಿಡಬೇಡಿ ಎಂದು ಹೇಳಿದರೂ ನೀರನ್ನು ಬಿಡುತ್ತಿದ್ದರು. ನಮ್ಮ ಆಕ್ರೋಶದಿಂದ ಹೋಗಲಿಲ್ಲ. ಅನೇಕ ರಾಜಕಾರಣಿಯವರ ಬಗ್ಗೆ ನಾನು ಏನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈಗ ನಾನು ತುಂಬಾ ಸ್ಪಷ್ಟವಾಗಿ ಮಾನ್ಯ ರವಿಯವರು ಏನು ಮಂಡನೆ ಮಾಡಿದ್ದಾರೆ. ಸರ್ಕಾರವು ಈ 4 ಜಲಾಶಯಗಳ ಒಟ್ಟಾರೆ ಜಲ ಸಂಗ್ರಹಣೆ ನೀರನ್ನು ಬಳಸುವುದು ಅತ್ಯಾವಶ್ಯಕ ಮತ್ತು ಅನಿವಾರ್ಯವೆಂಬುದನ್ನು ಸರ್ಕಾರವು ಖಾತರಿಪಡಿಸಿಕೊಳ್ಳಬೇಕೆಂದು ಈ ಸದನವು ನಿರ್ಣಯಿಸುತ್ತದೆ ಇದನ್ನು ಸರ್ಕಾರವು ಗಮನಿಸಬೇಕು. ಕಾವೇರಿ ನೀರಿನಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಎಂದು ನೀರಿನ ಮೇಲೆ ಬರೆದಿರುವುದಿಲ್ಲ. ಆ ನೀರು ಕರ್ನಾಟಕ ನೀರು ಅಷ್ಟೇ. ಇದು ಪಕ್ಷದ ನೀರುಅಲ್ಲ. ಹಾಗಾಗಿ ಸರ್ಕಾರ ಈ ಒಂದು ಸಂದರ್ಭದಲ್ಲಿ ಏನು ದಿಟ್ಟ ಹೆಜ್ಜೆಯನ್ನು ಇಡಬೇಕು ಎಂದು ಯೋಚನೆ ಮಾಡುತ್ತಿದ್ದೇವೆ. ನಾವು ನಿಮ್ಮ ಜೊತೆ ಇರುತ್ತೇವೆ. ಯಾವುದೇ ಕಾರಣಕ್ಕೂ ನಾವು ಹಿಂದೆ ಮುಂದೆ ನೋಡುವುದಿಲ್ಲ. ಹಾಗಾಗಿ ಇವತ್ತು ಕುಡಿಯುವ ನೀರೆ ಇಲ್ಲ ಎನ್ನುವಂತಹ ಸಂದರ್ಭದಲ್ಲಿ ವಾಸ್ತವಿಕ ಪರಿಸ್ಥಿತಿಯನ್ನು ಸುಪ್ರೀಂಕೋರ್ಟ್ ಅರ್ಥಮಾಡಿಕೊಳ್ಳದೆ ಇರುವ ಸಂಧರ್ಭದಲ್ಲಿ ಈ ಸದನ ಅನಿವಾರ್ಯವಾಗಿ ನಾವು ಸರ್ಕಾರಕ್ಕೆ ಬಹಳ ಸರಿ ಹೇಳಿದ್ದೇವೆ. ವಿಧಾನಮಂಡಲದಲ್ಲಿ ಅಧಿವೇಶನವನ್ನು ಮಾಡಿ ಎಂದು. ಮೊದಲೇ ಈ ಅಧಿವೇಶನದಲ್ಲಿ ನಿರ್ಣಯ ಮತ್ತು ಚರ್ಚೆ ಮಾಡೋಣ. ಆದರೆ, ನಮಗೆ ಆದಂತಹ ಅನ್ಯಾಯದ ಬಗ್ಗೆ ಎಷ್ಟೋ ಬಾರಿ ಕೋರ್ಟ್‌ಗಳಾಗಲಿ, ಸರ್ಕಾರಗಳಾಗಲಿ ಲಕ್ಷ್ಯ ಕೊಡುವಂತಹ ಪರಿಸ್ಥಿತಿ ನಿರ್ಮಾಣವಾಗಿಲ್ಲ. ಅದು ನಮ್ಮ ಸರಳತೆಯೋ, ಅದು ನಮ್ಮ ಸೌಜನ್ಯವೋ ನಮಗೆ ಗೊತ್ತಾಗಿಲ್ಲ. ಈ ಹಿನ್ನೆಲೆಯಲ್ಲಿ ಇವತ್ತಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಹೀಗಾಗಿ, ಕಳೆದ ಎರಡು ವರ್ಷಗಳಿಂದ ನಮಗೆ ತೊಂದರೆಯಾಗಿದೆ. ನಮಗೆ ಈ ರೀತಿ ಆಗಿರುವುದರಿಂದ, ಈ ವರ್ಷ ಆಗಿರುವಂತಹ ತೊಂದರೆಯನ್ನು ಯಾವ ರೀತಿ ಪರಿಹಾರ ಮಾಡಿಕೊಳ್ಳಬೇಕೆಂದು ಯಾರಿಗೂ ತಿಳಿಯಲಾರದಷ್ಟು ಸಮಸ್ಯೆ ಉಂಟಾಗಿದೆ. ಕಳೆದ 29 ವರ್ಷಗಳ ಇತಿಹಾಸವನ್ನು ನೋಡಿದಾಗ ಇಂತಹ ಪರಿಸ್ಥಿತಿ ಯಾವಾಗಲೂ ಬಂದಿರುವುದಿಲ್ಲ. ಪ್ರಸ್ತುತ, ತಲಕಾವೇರಿಯಲ್ಲಿ 50% ರಷ್ಟು ನೀರು ಕಡಿಮೆಯಾಗಿದೆ. ಮತ್ತೆ, ಕಾವೇರಿ ನ್ಯಾಯಾಧಿಕರಣದಿಂದ ಸಿಗಬೇಕಾದ ನೀರಿನ ಪಾಲಿನಲ್ಲೂ ಸಹಿತ ನಮಗೆ ಅನ್ಯಾಯವಾಗಿದೆ. ತಮಿಳು ನಾಡಿಗೆ ನ್ಯಾಯ ಕೊಟ್ಟಿದ್ದಾರೆ. ಪದೇ ಪದೇ ತಮಿಳು ನಾಡಿಗೆ ನ್ಯಾಯ ಹೋಗುತ್ತಿದೆ. ನಾನು ಯಾರನ್ನೂ ಟೀಕೆ ಮಾಡಲಿಕ್ಕೆ ಹೋಗುವುದಿಲ್ಲ. ನಾವು ಇಲ್ಲಿನ ಪರಿಸ್ಥಿತಿಯನ್ನು ಅನೇಕ ಬಾರಿ ಚೆನ್ನಾಗಿ ಮನವರಿಕೆ ಮಾಡಿಕೊಟ್ಟರೂ ಸಹ, ಅನೇಕ ಬಾರಿ ನಮ್ಮ ವಾದವನ್ನು ಮಂಡನೆ ಮಾಡಿದರೂ ಸಹಿತ, ಏತಕ್ಕೋ ನಮ್ಮ ಪರವಾಗಿ ತೀರ್ಪು ಬಂದಿಲ್ಲ.

ಮಾನ್ಯ ಸಭಾಪತಿಯವರೆ, ಈ ಹಿನ್ನೆಲೆಯಲ್ಲಿ ನಾನು ಇಷ್ಟೇ ಹೇಳಲಿಕ್ಕೆ ಬಯಸುತ್ತೇನೆ. ತಮಿಳು ನಾಡಿಗೆ ಇನ್ನು ಮುಂದೆ ಮಳೆ ಪ್ರಾರಂಭವಾಗುತ್ತದೆ. ಇನ್ನು, ಮೆಟ್ಟೂರು ಡ್ಯಾಮ್ ವಿಚಾರವಾಗಿ ಹೇಳ ಬೇಕಾಗುತ್ತದೆ. ಅಂದಿನ ಕಾಲದಲ್ಲಿ ನಾವು ಕೆ.ಆರ್.ಎಸ್. ಡ್ಯಾಮ್ ಕಟ್ಟಿದಾಗ ಅ ಸಮಯದಲ್ಲೂ ಸಹ restrict ಮಾಡಿದರು. ಮೆಟ್ಟೂರು ಡ್ಯಾಮ್ ಕಟ್ಟಲಿಕ್ಕೆ ಯಾವುದೇ restriction ಇಲ್ಲ. ಮೆಟ್ಟೂರು ಡ್ಯಾಮ್ ತುಂಬಿದರೆ ಸಮುದ್ರಕ್ಕೆ ನೀರು ಹೋಗುತ್ತದೆ. 56 ಟಿಎಂಸಿ ನೀರು ಇವತ್ತು ಮೆಟ್ಟೂರು ಡ್ಯಾಮ್‌ನಲ್ಲಿ ಇದೆ. ಇಷ್ಟು ಇದ್ದರೂ ಸಹಿತ ಈ ವಿಚಾರವನ್ನು ಸಂಬಂಧಪಟ್ಟವರಿಗೆ ಎಲ್ಲಾ ರೀತಿಯಲ್ಲೂ ಮನವರಿಕೆ ಮಾಡಿಕೊಟ್ಟರೂ ಸಹಿತ ಈ ದಿಸೆಯಲ್ಲಿ ನಮಗೆ ಉಪಯೋಗವಾಗಿಲ್ಲ. ಈ ಹಿನ್ನೆಲೆಯಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ಕೊಟ್ಟ ತೀರ್ಪಿನ ಪ್ರಕಾರ ಇವತ್ತು ಏನು ಮಾಡಲಿಕ್ಕೆ ಆಗದೇ ಇರುವಂತಹ ಪರಿಸ್ಥಿತಿ ನಮ್ಮದಾಗಿದೆ.

ಮಾನ್ಯ ಸಭಾಪತಿಯವರೆ, ಇವತ್ತು ನಾವು ಹೇಳುವುದೇನೆಂದರೆ, ನ್ಯಾಯಾಲಯದ ಆದೇಶವನ್ನು ನಾವು ಉಲ್ಲಂಘನೆ ಮಾಡಲಿಕ್ಕೆ ಆಗುವುದಿಲ್ಲವೆನ್ನುವುದನ್ನು ನಾವು ಒಪ್ಪುತ್ತೇವೆ. ಆದರೆ, ಇವತ್ತಿನ ಪರಿಸ್ಥಿತಿ ಏನಿದೆ? ನಾವು

ಅಸಹಾಯಕರಾಗಿದ್ದೇವೆ. ಆ ತೀರ್ಮಾನವನ್ನು ಪಾಲಿಸಲಿಕ್ಕೆ ಅಸಹಾಯಕರಾಗಿದ್ದೇವೆ. ಒಂದು ವಿಚಾರವನ್ನು ನಾನು ಓದಿದ್ದು, ಅದು ಎಷ್ಟರಮಟ್ಟಿಗೆ ಸರಿ ಇದೆಯೋ ಇಲ್ಲವೋ ಗೊತ್ತಿಲ್ಲ. ತಮಿಳು ನಾಡಿನಲ್ಲಿ ಒಬ್ಬ ನಟಿ, 15 ದಿವಸಗಳ dance programme contract ಕೊಟ್ಟಿದ್ದರು. 15 ದಿವಸಗಳಿಗೆ ಇಷ್ಟು ದುಡ್ಡು ಎಂದು ಹೇಳಿದ್ದರು. 8 ದಿವಸಗಳ ನಂತರ ಆಕೆಯ ಕಾಲು fracture ಆಯಿತು. ಕಾಲು fracture ಆದಾಗ 11 ದಿವಸಗಳ ದುಡ್ಡನ್ನು ಅವರಿಗೆ ಕೊಡಬೇಕಿತ್ತು. ಆದರೆ, ಕೊಡಲಿಕ್ಕೆ ಆಗುವುದಿಲ್ಲವೆಂದು ಹೇಳಿದಾಗ, ಅವರು ಕೋರ್ಟಿಗೆ ಹೋದರು. ಪರಿಸ್ಥಿತಿಯೇ ಈ ರೀತಿ ನಿರ್ಮಾಣವಾದಾಗ, ಕಾಲಿಗೆ ನೋವಾಗಿ, ಕುಣಿಯಲಿಕ್ಕೆ ಆಗದೇ ಇರುವಾಗ ಏನು ಮಾಡಲಿಕ್ಕೆ ಆಗುತ್ತದೆ? ಆ ಸಂದರ್ಭದಲ್ಲಿ ಆಕೆಗೆ ಎಲ್ಲಾ ಹಣವನ್ನು ಕೊಡಬೇಕೆನ್ನುವ ವಿಚಾರ ಒಂದು ಪತ್ರಿಕೆಯ ಆರ್ಟಿಕಲ್‌ನಲ್ಲಿ ಇದೆ. ನೀರು ಬಿಡಲಿಕ್ಕೆ ನಮ್ಮ ತಕರಾರು ಇಲ್ಲ. ಆದರೆ, ನಮಗೆ ನೀರು ಬಿಡುವಂತಹ ಶಕ್ತಿ ಇಲ್ಲ. ಕುಡಿಯುವುದಕ್ಕೆ ನಮಗೇ ನೀರು ಇಲ್ಲ. ಕಾವೇರಿ ನೀರು ಬಳಸುವಂತಹ ಅಂದರೆ, ಬೆಂಗಳೂರು ನಗರ ಸೇರಿದಂತೆ ಇತರ ಪ್ರದೇಶಗಳಿಗೆ ಕುಡಿಯಲಿಕ್ಕೆ ನೀರು ಇಲ್ಲದೇ ಇರುವಂತಹ ಪರಿಸ್ಥಿತಿಯಲ್ಲಿ ಸರ್ಕಾರ ಏನು ಒಂದು ನಿರ್ಣಯವನ್ನು ತಂದು ಮಂಡನೆಯನ್ನು ಮಾಡಿದ್ದಾರೆ. ಇವತ್ತು ಮಹದಾಯಿ ಅಥವಾ ಕಾವೇರಿ ವಿಚಾರ ತೆಗೆದುಕೊಳ್ಳುವುದಾದರೆ, ಒಂದು ಬಾರಿ ಕಾವೇರಿ ನೀರಿನ ವಿಚಾರ ಬಂದಾಗ ಇಲ್ಲಿ ಹೋರಾಟ ಮಾಡುತ್ತಿದ್ದರು. ಮಹದಾಯಿ ವಿಚಾರ ಬಂದಾಗ ಅಲ್ಲಿ ಹೋರಾಟ ಮಾಡುತ್ತಿದ್ದರು. ಆದರೆ, ಒಂದು ಸಂತೋಷದ ಸಂಗತಿ ಏನೆಂದರೆ, ಈ ಬಾರಿ ಇಡೀ ಕರ್ನಾಟಕ, ಅಖಂಡ ಕರ್ನಾಟಕ ಒಂದು ಎಂದು ನಮ್ಮ ರಾಜ್ಯದ ಜನರು ಏನು ಒಟ್ಟಾಗಿ ಹೋರಾಟ ಮಾಡಿದ್ದಾರೆ, ಇದು ನಿಜವಾಗಿಯೂ ಸಹ ಕರ್ನಾಟಕದ ಇತಿಹಾಸದಲ್ಲಿ ಸುವರ್ಣಾಕ್ಷರದಿಂದ ಬರೆದಿಡುವಂತಹ ವರ್ಷವೆಂದು ಹೇಳಲಿಕ್ಕೆ ಬಯಸುತ್ತೇನೆ. ಎಲ್ಲರೂ ಸಹ ಹೋರಾಟ ಮಾಡಿದ್ದಾರೆ. ಮಹದಾಯಿ ವಿಚಾರ ಬಂದಾಗಲೂ ಸಹ ಇಡೀ ಬೆಂಗಳೂರು, ಮೈಸೂರು ಜಿಲ್ಲೆ ಸೇರಿದಂತೆ ಇಡಿ ರಾಜ್ಯದ ತುಂಬಾ ಎಲ್ಲಾ ಜನರು ಹೋರಾಟ ಮಾಡಿದರು. ಅದೇ ರೀತಿ ಕಾವೇರಿ ವಿಷಯ ಬಂದಾಗಲೂ ಸಹ ಎಲ್ಲರೂ ಹೋರಾಟ ಮಾಡಿದರು. ನಾವು ಪಕ್ಷಗಳನ್ನು ಟೀಕೆ ಮಾಡಬಹುದು, ಬೇರೆ ಬೇರೆ ವಿಷಯಗಳಲ್ಲಿ ನಾವು ಟೀಕೆ-ಟಿಪ್ಪಣಿಗಳನ್ನು ಮಾಡಬಹುದು. ಆದರೆ, ಇಂತಹ ಪರಿಸ್ಥಿತಿ ಬಂದಾಗ ಇಡೀ ರಾಜ್ಯದ ಜನತೆ ಒಕ್ಕೊರಲಿನಿಂದ ಅಖಂಡ ಕರ್ನಾಟಕದವರು ನಾವು ಎಂದು ಹೇಳಿ, ಕರ್ನಾಟಕದ ನೆಲ-ಜಲ ವಿಷಯ ಬಂದಾಗ ನಾವು ಯಾರೂ ಸಹ ತಕರಾರು ಮಾಡುವುದಿಲ್ಲವೆನ್ನುವಂತಹ ಏನು ಒಂದು ದೊಡ್ಡ ಹೋರಾಟವನ್ನು ನಾವು ಮಾಡಿದ್ದೇವೆ, ಅದಕ್ಕೆ ನಾನು ನಿಜವಾಗಿಯೂ ಸಹ ಅಭಿನಂದನೆ ಸಲ್ಲಿಸುತ್ತೇನೆ. ಈ ಹಿನ್ನೆಲೆಯಲ್ಲಿ ಇವತ್ತಿನ ಸಂಕಷ್ಟದ ಪರಿಸ್ಥಿತಿಯಲ್ಲಿ ಬೇರೆಯದನ್ನು ಅಂದರೆ ಊಟ ಇಲ್ಲದಿದ್ದರೆ ತರಬಹುದು, ಆದರೆ, ಕುಡಿಯಲಿಕ್ಕೆ ನೀರನ್ನು ತರಲಿಕ್ಕೆ ಆಗುವುದಿಲ್ಲ. ಮತ್ತೆ, ದುರ್ದೈವ ಏನೆಂದರೆ, ಮೆಟ್ಟೂರು ಡ್ಯಾಮ್‌ನಿಂದ ನಾವು ನೀರು ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲ. ನಮ್ಮಿಂದಲೇ ನೀರು ಅಲ್ಲಿಗೆ ಹೋಗಬೇಕು. ಹೀಗಾಗಿ ಎಲ್ಲಾ ಕಡೆಯಿಂದ ನಮಗೆ ಕಷ್ಟ ಇದೆ. ಈ ಪರಿಸ್ಥಿತಿಯನ್ನು ಸರ್ಕಾರ ಮನಗಂಡು ಈ ನಿರ್ಣಯವನ್ನು ತಂದಿದೆ. ನಮ್ಮ ಶ್ರೀಯುತ ಈಶ್ವರಪ್ಪನವರು ಹೇಳಿದ ಹಾಗೆ ತಡವಾದರೂ ಚಿಂತೆಯಿಲ್ಲ, ಒಂದು ನಿರ್ಣಯಕ್ಕೆ ಬಂದಿದ್ದೇವೆ. ಇವತ್ತು ಏನು ಮಾನ್ಯ ಸದಸ್ಯರಾದ ಶ್ರೀಯುತ ಎಸ್.ರವಿ ಅವರು ಈ ಒಂದು ನಿರ್ಣಯವನ್ನು ತಂದಿದ್ದಾರೆ, ಆ ನಿರ್ಣಯವನ್ನು ಸಂಪೂರ್ಣವಾಗಿ ಇಲ್ಲಿ, ಪಕ್ಷ-ಭೇಧವನ್ನು ಮರೆತು ಏನು ಈ ಒಂದು ನಿರ್ಣಯವನ್ನು ತಂದಿದ್ದೀರಿ, ಅದಕ್ಕೆ ಸಂಪೂರ್ಣವಾದ ನಮ್ಮ ಸಹ ಮತವನ್ನು ವ್ಯಕ್ತ ಮಾಡಿ ಇಡೀ ದೇಶದಲ್ಲಿ ಮಾದರಿಯಾದಂತಹ ಕೆಲಸವನ್ನು ಕರ್ನಾಟಕ ವಿಧಾನ ಮಂಡಲ ಮಾಡಿದೆ ಎನ್ನುವಂತಹ ಒಂದು ಹೆಮ್ಮೆಯ ವಿಷಯವನ್ನು ಇಟ್ಟುಕೊಂಡು ಅದಕ್ಕೆ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ನಿರ್ಣಯವನ್ನು ಮಂಡಿಸಿದಂತಹ ಶ್ರೀಯುತ ಎಸ್. ರವಿ ಅವರು ಇದರ ಬಗ್ಗೆ ಏನಾದರೂ ಹೇಳುವುದಿದ್ದರೆ ಹೇಳಬೇಕು.

**ಶ್ರೀ ಎಸ್. ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ತಾವು ಮಂಡಿಸಿದಂತಹ ನಿರ್ಣಯಕ್ಕೆ ಬೆಂಬಲವಾಗಿ ಹಿರಿಯ ನಾಯಕರುಗಳು ಮಾತನಾಡಿದ್ದಾರೆ ಮತ್ತು ಬೆಂಬಲವನ್ನು ಸೂಚಿಸಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ಒಂದು ಆತಂಕಕಾರಿ ಸನ್ನಿವೇಶ, ಅತ್ಯಂತ ಗಂಭೀರವಾಗಿರತಕ್ಕಂತಹ ಸನ್ನಿವೇಶ ನಮ್ಮ ಮುಂದೆ ಇರತಕ್ಕಂತಹದ್ದು. ಕೆಲವು ದಿನಗಳಿಂದ ಇಡೀ ರಾಜ್ಯದಾದ್ಯಂತ ಈ ಬಾರಿ ಮಳೆಯ ಕೊರತೆಯಿಂದ ಎಷ್ಟು ಮಳೆ ಬರಬೇಕಾಗಿತ್ತೋ ಅಷ್ಟು ಬಾರದೇ ಇರತಕ್ಕಂಥ ಮಳೆಯ ಹಿನ್ನೆಲೆಯಲ್ಲಿ ರಾಜ್ಯದ ಬಹುತೇಕ ಪ್ರದೇಶಗಳಲ್ಲಿ ಬಿತ್ತಿದಂತಹ ಬೆಳೆ ಈಗಾಗಲೇ ನೆಲ ಕಚ್ಚಿದೆ. ಇನ್ನು, ಅದು ಮತ್ತೆ ಫಸಲನ್ನು ಕೊಡುವ ನಿರೀಕ್ಷೆಯಿಲ್ಲ ಮತ್ತು ನಿರೀಕ್ಷೆ ಆಗುವಷ್ಟು ಪ್ರಮಾಣದಲ್ಲಿ ಬಿತ್ತನೆ ಕೂಡ ಆಗದಿರತಕ್ಕಂತಹದ್ದು, ನಮ್ಮ ಇಲಾಖೆಗಳ ಅಂಕಿಅಂಶಗಳ ಆಧಾರದ ಮೇಲೆ ಈಗಾಗಲೇ ನಮಗೆ ಸಾಬೀತಾಗಿರತಕ್ಕಂತಹ ಒಂದು ಹಿನ್ನೆಲೆಯಲ್ಲಿ ಕುಡಿಯುವ ನೀರಿಗೆ ದುಸ್ತರವಾಗಿರುವಂತಹ ಸಂದರ್ಭ ಬಂದಿದೆ. ಕಳೆದ ಬಾರಿ ಕೂಡ ಉತ್ತಮವಾದಂತಹ ಮಳೆ ಏನೂ ನಮ್ಮ ರಾಜ್ಯ ಕಂಡಿರಲಿಲ್ಲ. ಕಳೆದ ಬಾರಿ ಕೂಡ ರಾಜ್ಯದ ಬಹುತೇಕ ಪ್ರದೇಶ ಕೃಷ್ಣ ಕೊಳ್ಳ ಇರಬಹುದು, ಕಾವೇರಿ ಕೊಳ್ಳಗಳಿರಬಹುದು, ಮಳೆಯ ತೀವ್ರ ಅಭಾವದಿಂದಾಗಿ ಕುಡಿಯುವ ನೀರಿನ ಅಭಾವವನ್ನು ಎದುರಿಸಿತ್ತು. ಇಂತಹ ಒಂದು ಸಂದರ್ಭದಲ್ಲಿ ದಿನೇ ದಿನೇ ಅಂತರ್ಜಲ ಕುಸಿಯುತ್ತಿದೆ. ಪ್ರಮುಖವಾಗಿ, ಈ ಕಾವೇರಿ ಕೊಳ್ಳದ ಭಾಗದಲ್ಲಿ ಇವತ್ತು ನಾವು ಕೆರೆಗಳನ್ನು ನೋಡಿದಾಗ, ಇವತ್ತು ಜಲಾಶಯಗಳೇನಿವೆ, ಅಣೆಕಟ್ಟೆಗಳು ಏನಿವೆ, ಕಾವೇರಿ ಕೊಳ್ಳದ ಪ್ರಮುಖ ಜಲಾಶಯಗಳನ್ನು ನಾವು ದೃಷ್ಟಿಸಿ ನೋಡಿದಂತಹ ಸಂದರ್ಭದಲ್ಲಿ ಅವುಗಳು ಜಲಾಶಯಗಳಾಗಿ ಅಥವಾ ಅಣೆಕಟ್ಟಗಳಾಗಿ ಉಳಿದಿಲ್ಲ, ಅವುಗಳು ಬೃಹತ್ತಾಗಿರುವಂತಹ ಕೆರೆಗಳ ಸ್ವರೂಪದಲ್ಲಿವೆ. ಅವುಗಳಲ್ಲಿ ಇರತಕ್ಕಂತಹ ನೀರಿನ ಸಂಗ್ರಹಣೆಯನ್ನು ನೋಡಿದಂತಹ ಸಂದರ್ಭದಲ್ಲಿ ಸೆಪ್ಟೆಂಬರ್ ಮೂರನೇ ವಾರದಲ್ಲಿ ನಮ್ಮಲ್ಲಿ ಗರಿಷ್ಟ ಮಳೆಯಾಗಿ ಕರೆಗಳು ತುಂಬುವಂತಹ ಒಂದು ಸಮೃದ್ಧಿಯ ಕಾಲ. ನಮ್ಮ ರೈತಾಪಿ ಜನಕ್ಕೆ ವ್ಯವಸಾಯ ಮಾಡತಕ್ಕಂತಹ ಸಂದರ್ಭ. ಕೆರೆ ಕಟ್ಟೆಗಳು ತುಂಬಿ ತುಳುಕುವಂತಹ ಇಂತಹ ಒಂದು ಸಂದರ್ಭದಲ್ಲಿ, ನಾವು ನಮ್ಮ ಭಾಗದ ಜಲಾಶಯಗಳ ಸ್ವರೂಪ ಕಳೆದುಕೊಂಡು ಕೇವಲ ಚಿಕ್ಕ ಕೆರೆಗಳಾಗಿರುವಂತಹ ಸಂದರ್ಭದಲ್ಲಿ ಅಂತರ್ಜಲ ತೀವ್ರ ಕುಸಿದಿರುತ್ತದೆ ಮತ್ತು ಕಾವೇರಿ ಕೊಳ್ಳದ ಪ್ರದೇಶ ವಿಶೇಷವಾಗಿ, ಬೆಂಗಳೂರು ಮಹಾನಗರ ಸೇರಿದಂತೆ ತುಮಕೂರು, ಹಾಸನ, ಮಂಡ್ಯ, ರಾಮನಗರ, ಅದೇ ರೀತಿಯಾಗಿ ಮೈಸೂರು, ಚಾಮರಾಜನಗರ ಈ ಜಿಲ್ಲೆಗಳ ಗ್ರಾಮಾಂತರ ಮತ್ತು ನಗರ ಪ್ರದೇಶಗಳು ಇವುಗಳು ಕೂಡ ಕಾವೇರಿ ಜಲಾಶಯದ ಕೊಳ್ಳದ ಮೈಸೂರು, ಚಾಮರಾಜನಗರ ಈ ಜಿಲ್ಲೆಗಳ ಗ್ರಾಮಾಂತರ ಮತ್ತು ನಗರ ಪ್ರದೇಶಗಳೂ ಕೂಡ ಕಾವೇರಿ ಜಲಾಶಯದ ಕೊಳ್ಳದ ಜಲಾಶಯಗಳ ಮೇಲೆ ಕುಡಿಯುವ ನೀರಿಗೆ ಅವಲಂಬಿತವಾಗಿರುವಂತಹದ್ದು, ಸತ್ಯಕ್ಕೆ ಹತ್ತಿರವಾಗಿರುವಂತಹ ಮಾತಾಗಿದೆ. ಜಲಾಶಯಗಳಲ್ಲಿ ನೀರಿನ ಕೊರತೆ ಇರುವುದರಿಂದ ಅಂತರ್ಜಲ ಒಂದು ಕಡೆ ತೀವ್ರವಾಗಿ ಕುಸಿಯುತ್ತಿರುವಂತಹ ಹಿನ್ನೆಲೆಯಲ್ಲಿ ದಿನೇದಿನೇ ಕುಡಿಯುವ ನೀರಿಗಾಗಿ ಕೊರದಿರುವಂತಹ ಕೊಳವೆ ಬಾವಿಗಳು ವಿಫಲವಾಗುತ್ತಿವೆ. ಸರಣಿಯೋಪಾದಿಯಲ್ಲಿ ಇವುಗಳು ದಿನೇದಿನೇ ವಿಫಲವಾಗುತ್ತಿರುವಂತಹ ಹಿನ್ನೆಲೆಯಲ್ಲಿ ಸರ್ಕಾರ ಈಗಾಗಲೇ ಒಂದು ಆದೇಶವನ್ನು ಕೊಟ್ಟಿದೆ. ಕೊಳವೆ ಬಾವಿಗಳನ್ನು ಕೊರೆಯಲಿಕ್ಕೆ ಜಿಲ್ಲಾಡಳಿತದ ಅನುಮತಿಯನ್ನು ಪಡೆಯಬೇಕಾದಂತಹ ಒಂದು ತೀವ್ರ ಸಂಕಷ್ಟದಲ್ಲಿ ನಾವು ಒಂದು ಕಡೆ ಇರತಕ್ಕಂತಹ ಸಂದರ್ಭದಲ್ಲಿ ಇದ್ದೇವೆ. ಅಂತಹ ಒಂದು ಸಂದರ್ಭದಲ್ಲಿ ರಾಜ್ಯದ ಜನರು ಹತಾಶರಾಗಿ ವ್ಯವಸಾಯ ಕ್ಷೇತ್ರ ತನ್ನ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಿರುವಂತಹ ಸಂದರ್ಭದಲ್ಲಿ ರೈತಾಪಿ ಜನರು ವ್ಯವಸಾಯದಿಂದ ಹಿಮ್ಮುಖವಾಗುತ್ತಿರುವಂತಹ, ಆಸಕ್ತಿಯನ್ನು ಕಳೆದುಕೊಳ್ಳುತ್ತಿರುವಂತಹ ಸಂದರ್ಭದಲ್ಲಿ ಮಳೆಯ ಮತ್ತು ಈ ನೀರಿನ ಕೊರತೆಯಿಂದ ವ್ಯವಸಾಯವನ್ನೇ ಬಿಟ್ಟು, ಕೇವಲ ಕುಡಿಯುವ ನೀರನ್ನು ಸಂಗ್ರಹಣೆ ಮಾಡಬೇಕೆಂದು ಈಗಾಗಲೇ ಸರ್ಕಾರ ಚಿಂತನೆಯನ್ನು ನಡೆಸಿ, ಆ ದಿಕ್ಕಿನಲ್ಲಿ ಕ್ರಮ ತೆಗೆದುಕೊಳ್ಳುತ್ತಿರುವಂತಹ ಸಂದರ್ಭದಲ್ಲಿ ಕುಡಿಯುವ ನೀರಿಗೂ ಧಕ್ಕೆಯಾಗುತ್ತಿರುವಂತಹ ಸಂದರ್ಭ ಒದಗಿ ಬಂದಿದೆ. ಈ ಬಾರಿಯ ಬೇಸಿಗೆಯನ್ನು ನೆನೆಸಿಕೊಂಡರೆ ನಮ್ಮಲ್ಲಿ ನನಗಿಂತಹ ಹಿರಿಯರು, ಅಂದರೆ ನನಗಿಂತ ಹೆಚ್ಚು ವಯಸ್ಸಾಗಿರುವಂತಹವರೆಲ್ಲರೂ ಈ ವಿಚಾರವಾಗಿ ಪ್ರಸ್ತಾಪ ಮಾಡುತ್ತಾರೆ. ನಾವು ಈ ರೀತಿಯಾಗಿರುವಂತಹ ಬೇಸಿಗೆಯನ್ನೇ ನೋಡಿರಲಿಲ್ಲವೆಂದು ಹೇಳುತ್ತಾರೆ. ಈ

ರೀತಿಯ ಬಿಸಿಲಿನ ತಾಪವನ್ನು ನಾವು ಅನುಭವಿಸಿಯೇ ಇರಲಿಲ್ಲ. ಈ ರೀತಿ ನೋಡಿ ಎಷ್ಟೋ ವರ್ಷಗಳಾಗಿತ್ತು. ಈ ಬಾರಿ ಮಾರ್ಚ್, ಏಪ್ರಿಲ್‌ನಲ್ಲಿ ಇದ್ದಂತಹ, ಈ ರಾಜ್ಯ ಕಂಡಂತಹ ಬಿಸಿಲನ್ನು ನೆನಪು ಮಾಡಿಕೊಂಡು ನಾವು ಮುಂದೆ ಬರುವಂತಹ ಬಿಸಲು. . 8–9 ತಿಂಗಳ ಕಾಲ. . ನಮಗೆ ಗರಿಷ್ಠ ಮಳೆಯಾಗತಕ್ಕಂತಹ ಪ್ರಮಾಣ ಈಗ ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ ತಿಂಗಳಿನಲ್ಲಿ ಆಗಬೇಕಾಗಿತ್ತು. ಅದರಲ್ಲೂ ಮಲೆನಾಡು ಪ್ರದೇಶದಲ್ಲಿಯೂ ಸಹ ಮಳೆಗೆ ಬರಗಾಲ ಇದೆ. ಏನು ಶರಾವತಿ ಕೊಳ್ಳದಲ್ಲಿ ಇರಬಹುದು, ಮತ್ತೊಂದು ಕಡೆ ಇರಬಹುದು. ತಾವು ಸಹ ಮಲೆನಾಡು ಪ್ರದೇಶದಿಂದ ಬಂದಿದ್ದೀರಿ. ತಮ್ಮ ಭಾಗದಲ್ಲೂ ಕೂಡ ವಾಡಿಕೆಗಿಂತ ಶೇಕಡ 50 ರಷ್ಟು ಕಡಿಮೆ ಮಳೆಯಾಗಿರುವಂತಹ ಒಂದು ಭೀಕರ ಪರಿಸ್ಥಿತಿಯಲ್ಲಿ ಕುಡಿಯುವ ನೀರಿಗಾಗಿ ಇವತ್ತು ಶೇಖರಣೆ ಮಾಡಿರತಕ್ಕಂತಹ ಅಲ್ಪ–ಸ್ವಲ್ಪ ನೀರಿಗೂ ಕೂಡ ಧಕ್ಕೆ ಬಂದಿರತಕ್ಕಂತಹದ್ದು ನಿಜಕ್ಕೂ ಕೂಡ ಆತಂಕಕಾರಿ, ಗಂಡಾಂತರಕಾರಿಯಾದಂತಹ ಒಂದು ಪರಿಸ್ಥಿತಿ. ಈ ಕಾವೇರಿ ನದಿ ವಿವಾದ ನಮ್ಮ ರಾಜ್ಯಕ್ಕೆ ಹೊಸದೇನಲ್ಲ. ಕಾವೇರಿ ನದಿ ವಿವಾದ ರಾಜ್ಯಕ್ಕೆ . .

**ಸಭಾಪತಿಯವರು:–** ಅದರ ಬಗ್ಗೆ ಬೇಡ. ನಿರ್ಣಯದ ಬಗ್ಗೆ ಮಾತನಾಡಿ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೆ, ನಾನು ಇತಿಹಾಸಕ್ಕೆ ಹೋಗುವುದಿಲ್ಲ. ತಾವು ಗಮನಿಸಿದಂತೆ ಈಗ ಕಾವೇರಿ ನದಿಯ ಪ್ರಮುಖ ಜಲಾಶಯಗಳಲ್ಲಿ ಶೇಖರಣೆಯಾಗಿರುವಂತಹ ನೀರು ಕುಡಿಯುವ ಉದ್ದೇಶಕ್ಕಾಗಿ, ಬೆಂಗಳೂರು ನಗರ ಸೇರಿದಂತೆ ಜಿಲ್ಲಾ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ದಿನವೊಂದಕ್ಕೆ 600 ರಿಂದ 800 ಕ್ಯೂಸೆಕ್ಸ್ ನೀರು ಬೇಕು. ಅಂದರೆ ತಿಂಗಳಿಗೆ 2 ಟಿ.ಎಂ.ಸಿ. ನೀರು ಬೇಕಾಗುತ್ತದೆ. ಮುಂದಿನ ವರ್ಷದ ಜೂನ್–ಜುಲೈ ತಿಂಗಳಗಳವರೆಗೆ ನಮಗೆ ನೀರಿನ ಅಗತ್ಯತೆ ಕಂಡು ಬರುತ್ತಿರುವಂತಹ ಈ ಸಂದರ್ಭದಲ್ಲಿ 18 ಟಿ.ಎಂ.ಸಿ.ಗೂ ಅಧಿಕವಾದ ನೀರು ನಮಗೆ ಬೇಕಾಗುತ್ತದೆ. ಈ ಸಂದರ್ಭದಲ್ಲಿ ನಮ್ಮಲ್ಲಿ ನೀರಿನ ಸಂಗ್ರಹಣೆ ಇಲ್ಲ. ಸಂಗ್ರಹಿಸಿದ ನೀರಿನಲ್ಲಿ dead storage ಬಿಟ್ಟರೆ 13 ½ ಟಿ.ಎಂ.ಸಿ. ನೀರು ಮಾತ್ರ ಇರುತ್ತದೆ.

**ಶ್ರೀ ಪುಟ್ಟಣ್ಣ:–** ನಮಗೆ 24 ಟಿ.ಎಂ.ಸಿ. ನೀರು ಕುಡಿಯುವ ಸಲುವಾಗಿ ಬೇಕು.

**ಸಭಾಪತಿಯವರು:–** ವಿವರಣೆ ಬೇಡ. ಈಗ ಮಂಡಿಸಿರುವ ನಿರ್ಣಯದ ಬಗ್ಗೆ ಮಾತ್ರ ಮಾತನಾಡಿ. ನಿರ್ಣಯವನ್ನು ಒಪ್ಪಬೇಕೆನ್ನುವುದರ ಬಗ್ಗೆ ಮಾತನಾಡಿ. ಈ ನಿರ್ಣಯವನ್ನು ಒಪ್ಪಬೇಕೆಂದು ಸದನಕ್ಕೆ ಪ್ರಾರ್ಥನೆ ಮಾಡಿ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೆ, ನೀರಿನ ತೀವ್ರ ಕೊರತೆ ಇರುವಂತಹ ಸಂದರ್ಭದಲ್ಲಿ ಪಾಲಿಸುವ ಆದೇಶ ಏನು ಇದೆ, ಅದನ್ನು ಪಾಲಿಸಲು ಸಾಧ್ಯವೆ ಇಲ್ಲ ಎನ್ನುವಂತಹ ಸಂಕಷ್ಟದ ಪರಿಸ್ಥಿತಿ ಇರುವಾಗಲೂ ಸರಣಿಯೋಪಾದಿಯಲ್ಲಿ ಬಂದಿರತಕ್ಕಂತಹ ಆದೇಶಗಳನ್ನು ಪ್ರಜಾಪ್ರಭುತ್ವದ ಒಕ್ಕೂಟ ವ್ಯವಸ್ಥೆಯಲ್ಲಿ ನಾವು ಗೌರವಿಸುವಂತಹ ಸಂದರ್ಭಗಳು ಇವೆ. ಈಗಾಗಲೇ ಭಾರತದ ಸರ್ವೋಚ್ಚ ನ್ಯಾಯಾಲಯವು ದಿನಾಂಕ 05/09/2016 ಹಾಗೂ ದಿನಾಂಕ 12/09/2016 ಗಳಂದು ನೀಡಿರುವ ಆದೇಶಗಳನ್ನು ನಾವು ಪಾಲಿಸಿಕೊಂಡು ಬಂದಿದ್ದೇವೆ ಹಾಗೂ ಗೌರವವನ್ನು ಸೂಚಿಸಿದ್ದೇವೆ. ಆದರೆ, ಈಗ ನಮಗೆ ಅನಿವಾರ್ಯ ಸಂದರ್ಭ ಬಂದೊದಗಿದೆ. ನಮಗೆ ಆದೇಶವನ್ನು ಪಾಲಿಸಲು ಸಾಧ್ಯವೇ ಇಲ್ಲ ಎನ್ನುವಂತಹ ಈ ಸಂದರ್ಭದಲ್ಲಿ ಅನಿವಾರ್ಯವಾಗಿ ಪ್ರಸ್ತುತ ನಿರ್ಣಯವನ್ನು ರಾಜ್ಯದ ಜನರ ಹಿತಾಸಕ್ತಿಗಾಗಿ ನಾವು ತೆಗೆದುಕೊಳ್ಳಬೇಕಾದಂತಹ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಆದ್ದರಿಂದ ನಾನು ಈ ನಿರ್ಣಯವನ್ನು ಅಂಗೀಕರಿಸಲು ಸದನದ ಬೆಂಬಲವನ್ನು ಮತ್ತೊಮ್ಮೆ ಕೋರುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ನಿರ್ಣಯ ಏನೆಂದರೆ;

*"2016–17 ನೇ ಜಲವರ್ಷದಲ್ಲಿ ಸಂಕಷ್ಟದ ತೀವ್ರ ಗಂಭೀರ ಪರಿಸ್ಥಿತಿ ಇರುವುದನ್ನು ಈ ಸದನವು ತೀವ್ರ ಆತಂಕದಿಂದ ಗಮನಿಸಿದೆ. ಆದರೆ ನೀರಿನ ಕೊರತೆಯ ಪ್ರಮಾಣವೇನು ಎಂಬುದು ಈ ಋತುವಿನ ಅಂತ್ಯ ಅಂದರೆ ದಿನಾಂಕ 31/01/2017 ರ ನಂತರವೇ ಸ್ಪಷ್ಟವಾಗಿ ತಿಳಿಯಲಿದೆ ಎಂಬುದನ್ನೂ ಈ ಸದನ ಗಮನಿಸಿದೆ.*

*ಕಾವೇರಿ ಕೊಳ್ಳದ ನಾಲ್ಕು ಜಲಾಶಯಗಳಾದ ಕೃಷ್ಣರಾಜ ಸಾಗರ, ಹೇಮಾವತಿ, ಹಾರಂಗಿ ಮತ್ತು ಕಬಿನಿ ಇವುಗಳಲ್ಲಿ ನೀರಿನ ಮಟ್ಟ ಅತ್ಯಂತ ತಳಮಟ್ಟದ ಹಂತವನ್ನು ತಲುಪಿರುವುದನ್ನು ಮತ್ತು ಕೇವಲ ಒಟ್ಟು 27.6 ಟಿ.ಎಂ.ಸಿ. ಮಾತ್ರ ನೀರು ಇರುವುದನ್ನು ಈ ಸದನವು ಆತಂಕದಿಂದ ಪರಿಗಣಿಸಿದೆ.*

*ಈ ಗಂಭೀರ ಮತ್ತು ಆತಂಕಕಾರಿ ವಾಸ್ತವ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಬೆಂಗಳೂರು ಮಹಾನಗರವೂ ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿನ ಪಟ್ಟಣಗಳು ಹಾಗೂ ಹಳ್ಳಿಗಳ ಕುಡಿಯುವ ನೀರಿನ ಅವಶ್ಯಕತೆಗಳಿಗಾಗಿ ಮಾತ್ರ ಈಗಿರುವ ನಾಲ್ಕೂ ಜಲಾಶಯಗಳ ಒಟ್ಟಾರೆ ಜಲಸಂಗ್ರಹಣೆಯಿಂದ ನೀರನ್ನು ಬಳಸುವುದು ಅತ್ಯಾವಶ್ಯಕ ಮತ್ತು ಅನಿವಾರ್ಯವೆಂಬುದನ್ನು ಸರ್ಕಾರವು ಖಾತರಿಪಡಿಸಿಕೊಳ್ಳಬೇಕೆಂದು ಈ ಸದನವು ನಿರ್ಣಯಿಸುತ್ತದೆ.*

*ಹಾಗಾಗಿ, ಕರ್ನಾಟಕ ರಾಜ್ಯದಲ್ಲಿ ವಾಸವಾಗಿರುವ ಜನರ ಹಿತಾಸಕ್ತಿಯನ್ನು ಪರಿಗಣಿಸಿ, ಕಾವೇರಿ ಕೊಳ್ಳದ ನಾಲ್ಕೂ ಜಲಾಶಯಗಳಲ್ಲಿ ಹಾಲಿ ಇರುವ ಒಟ್ಟಾರೆ ಜಲಸಂಗ್ರಹಣೆಯಾಗಿರುವ ನೀರನ್ನು ಬೆಂಗಳೂರು ಮಹಾನಗರವೂ ಸೇರಿದಂತೆ, ಕಾವೇರಿ ಕೊಳ್ಳದ ಜನರಿಗೆ ಮೂಲಭೂತ ಅವಶ್ಯಕವಾದ ಕುಡಿಯುವ ನೀರನ್ನು ಒದಗಿಸುವ ಉದ್ದೇಶಕ್ಕಾಗಿ ಹಾಗೆಯೇ ಸಂಪೂರ್ಣವಾಗಿ ಉಳಿಸಿಕೊಳ್ಳಲು ಮತ್ತು ಇದಕ್ಕೆ ಹೊರತಾದ ಬೇರೆ ಯಾವುದೇ ಕಾರಣಕ್ಕೂ ಒದಗಿಸಲು ಸಾಧ್ಯವಿಲ್ಲವೆಂಬ ನಿರ್ಣಯವನ್ನು ಈ ಸದನವು ಸರ್ವಾನುಮತದಿಂದ ಅಂಗೀಕರಿಸುವುದು.*

<u>ನಿರ್ಣಯವು ಅಂಗೀಕರಿಸಲ್ಪಟ್ಟಿತು ಹಾಗೂ ನಿರ್ಣಯಕ್ಕೆ ಸದನದ ಸರ್ವಾನುಮತದ ಅನುಮೋದನೆ ದೊರೆಯಿತು</u>

**(ಸದನವು ರಾಷ್ಟ್ರಗೀತೆಯೊಂದಿಗೆ ಅನಿರ್ದಿಷ್ಟಾವಧಿವರೆಗೆ ಮುಂದೂಡಲ್ಪಟ್ಟಿತು)**

**(ಸದನವು 1 ಗಂಟೆ 55 ನಿಮಿಷಕ್ಕೆ ಮುಕ್ತಾಯಗೊಂಡಿತು)**